CC-O. In Public Domain. Digitized by eGangotri

ಸಂಖ್ಯೆ ೧೦೩

ಬೆಲೆ: [illegible]

ಗೋಪಾಲಕೃಷ್ಣ ಗೋಖಲೆ

ಡಾ॥ ದೇ. ಜವರೇಗೌಡ, ಎಂ.ಎ.

ರಾಜ್ಯವಯಸ್ಕರ ಶಿಕ್ಷಣ ಸಮಿತಿ
ಮೈಸೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri
ವಯಸ್ಕರ ಶಿಕ್ಷಣ ಪುಸ್ತಕಮಾಲೆ-೧೦೩

ಗೋಪಾಲಕೃಷ್ಣ ಗೋಖಲೆ

ಪ್ರೊ|| ದೇ. ಜವರೇಗೌಡ, ಎಂ. ಎ.,

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು
Sri Vidyabharathi Book Centre, Sringeri

ಮೊದಲನೆಯ ಮುದ್ರಣ [illegible] : ೩,೦೦೦ ಪ್ರತಿಗಳು
ಎರಡನೆಯ ಮುದ್ರಣ ೧೯೬೦ : ೩,೦೦೦ ಪ್ರತಿಗಳು
ಮೂರನೆಯ ಮುದ್ರಣ ೧೯೭೦ : ೩,೦೦೦ ಪ್ರತಿಗಳು
ನಾಲ್ಕನೆಯ ಮುದ್ರಣ ೧೯೭೭ : ೫೦೦೦ ಪ್ರತಿಗಳು

CC-0. In Public Domain. Digitized by eGangotri

ಬೆಲೆ : ೫೦ ಪೈಸೆ

ಮುದ್ರಕರು :
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮುದ್ರಣಾಲಯ
ಮೈಸೂರು-೪

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿಕೆ

ಬಹಳ ಹಿಂದಿನ ಕಾಲದಿಂದ ಭರತಖಂಡದ ಆಕ್ರಮಣ ನಡೆಯುತ್ತ ಬಂದಿದೆ. ಆಕ್ರಮಣಕಾಲದಲ್ಲಿ ಕೆಲವರು ಕೈಗೆ ಸಿಕ್ಕಿದುದನ್ನು ದೋಚಿ ಕೊಂಡು ಹೋದರು; ಕೆಲವರು ಈ ನೆಲವನ್ನೇ ತಾಯ್ನೆಲವನ್ನಾಗಿ ಸ್ವೀಕರಿಸಿ ಇಲ್ಲಿಯ ಜನಾಂಗದೊಡನೆ ಲೀನವಾಗುಳಿದರು; ಕೆಲವರು ಈ ಜನರೊಡನೆ ಲೀನವಾಗಿದ್ದರೂ ಈ ನೆಲವೇ ತಾಯ್ನೆಲವೆಂದು ಭಾವಿಸಿ ಉಳಿದರು; ಆದರೆ ಕೊನೆಕೊನೆಗೆ ಬಂದ ಆಕ್ರಮಣಕಾರರು ಇಲ್ಲಿ ತಮ್ಮ ಸಾರ್ವಭೌಮತ್ವದ ಧ್ವಜವನ್ನು ಹಾರಿಸಿ, ಇಲ್ಲಿಯವರನ್ನು ದಾಸ್ಯರೂಪಕ್ಕೆ ತಳ್ಳಿ, ಇಲ್ಲಿಯ ಐಶ್ವರ್ಯವನ್ನು ತಮ್ಮ ನಾಡಿಗೆ ಕೊಂಡೊಯ್ಯುವುದರಲ್ಲಿ ನಿರತರಾದರು. ಒಟ್ಟಿನಲ್ಲಿ ಇತ್ತೀಚಿನವರೆಗಿನ ಭರತಖಂಡದ ಇತಿಹಾಸವನ್ನು 'ಆಕ್ರಮಣ ಇತಿಹಾಸ'ವೆಂದಾದರೂ ಕರೆಯಬಹುದು.

ಆದರೆ ಈ ಆಕ್ರಮಣ ಪರಂಪರೆಗೆ ಭಾರತೀಯರ ಕ್ಲೈಬ್ಯ ದೌರ್ಬಲ್ಯಗಳು ಕಾರಣವೆನ್ನುವುದಕ್ಕಿಂತ—ಅದರ ಅನ್ಯೈಕಮತ್ಯವೂ ಕಾರಣ, ನಿಜ-ಲೌಕಿಕ ವಾದ ಆಶೋತ್ತರಗಳ ಕಡೆಗಿದ್ದ ಅವರ ನಿರ್ಲಕ್ಷತೆ ಮತ್ತು ನಿರ್ಮಮತೆಗಳೇ ಕಾರಣವೆನ್ನಲು ಅಡ್ಡಿಯಿಲ್ಲ. ಆದರೂ ಭಾರತೀಯರು ಕೈಲಾಗದವರಲ್ಲ, ಪರರ ಆಕ್ರಮಣವನ್ನು ಸಹಿಸುವವರಲ್ಲ. ಅವರೂ ಇತರರಂತೆ ಸ್ವಾತಂತ್ರ್ಯ ಪ್ರಿಯರು ಎನ್ನುವುದಕ್ಕೆ ೧೮೫೭ ನೆಯ ಮೇ ತಿಂಗಳಲ್ಲಿ ಮೀರತ್ ನಗರದಲ್ಲಿ ನಡೆದ ಮಹಾಕ್ರಾಂತಿ (ಸಿಪಾಯಿ ದಂಗೆ)ಯೇ ಚಿರ ಸಾಕ್ಷಿಯಾಗಿದೆ. ಅಲ್ಲಿಂದೀಚೆಗೆ, ರಾಜಾರಾಮ ಮೋಹನರಾಯ್, ದೇವೇಂದ್ರನಾಥಠಾಕೂರ್, ಸ್ವಾಮಿ ವಿವೇಕಾನಂದ, ರವೀಂದ್ರನಾಥಠಾಕೂರ್, ಗೋಪಾಲಕೃಷ್ಣ ಗೋಖಲೆ, ಮಹಾತ್ಮ ಗಾಂಧೀಜಿ ಮೊದಲಾದ ವಿಭೂತಿ ಪುರುಷರು ಬ್ರಿಟಿಷ್ ಸಾಮ್ರಾಜ್ಯದ ತಳಹದಿಯನ್ನು ಬಿರುಕುಗೊಳಿಸಿ, ಸಡಿಲಗೊಳಿಸಿ, ಭರತಖಂಡದ ಹಿರಿಮೆಯನ್ನು ದೇಶ ವಿದೇಶಗಳಲ್ಲಿ ಹರಡಿ, ಭಾರತೀಯರ ಆತ್ಮ ಗೌರವವನ್ನು ಕಾಪಾಡಿದ್ದಾರೆ.

ಭರತಖಂಡಕ್ಕೆ ಸ್ವಾತಂತ್ರ್ಯ ಲಭಿಸಿ ಕೇವಲ ೧೩ ವರ್ಷಗಳಾದುವು, ನಿಜ. ಈ ಸ್ವಾತಂತ್ರ್ಯ ಲಾಭಕ್ಕೆ ಇತ್ತೀಚಿನ ಘಟನೆಗಳು ಎಷ್ಟು ಮುಖ್ಯವೋ, ಇತ್ತೀಚಿನ ಮಹಾಪುರುಷರು ಎಷ್ಟರಮಟ್ಟಿಗೆ ಕಾರಣರೋ, ೧೮೫೭ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಕ್ರಾಂತಿಯೂ ಅಷ್ಟು ಮುಖ್ಯ. ಹಿಂದಿನ ಮಹಾಪುರುಷರೂ ಎಷ್ಟರ ಮಟ್ಟಿಗೆ ಕಾರಣರೆಂಬುದನ್ನು ಮರೆಯಲಾಗದು. ರಾಜಾರಾಮ ಮೋಹನ ರಾಯರು ಇಂಗ್ಲೆಂಡಿನಲ್ಲಿ ಗುಡುಗಿದಾಗಲೇ, ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ಗರ್ಜಿಸಿದಾಗಲೇ ವಿದೇಶಿಯರ ಎದೆ ಜರ್ಝರಿತವಾಯಿತು. ಭಾರತೀಯರು ನಿದ್ದೆ ತಿಳಿದೆದ್ದು ಮೈಕೊಡವಿ ನಿಂತರು.

ಹೀಗೆಯೇ ಗೋಪಾಲಕೃಷ್ಣ ಗೋಖಲೆಯವರು ಮುಂಬರುವ ಸ್ವಾತಂತ್ರ್ಯಕ್ಕೆ ಬೆಟ್ಟವನ್ನು ಕಡಿದು, ಹಳ್ಳಕೊಳ್ಳಗಳನ್ನು ತುಂಬಿ, ಜಾಡನ್ನು ಸಮೆಸಿದರು. ಅವರು ಉಗ್ರವಾದಿಗಳಲ್ಲ, ನಿಜ. ಆದರೆ ಅಂದಿನ ವಾತಾವರಣದಲ್ಲಿ ಸನ್ನಿವೇಶ ಸೌಲಭ್ಯಗಳಲ್ಲಿ ಎಷ್ಟು ಸೇವೆಯನ್ನು ಸಲ್ಲಿಸಬಹುದಾಗಿತ್ತೋ ಅಷ್ಟನ್ನು ನಿಸ್ವಾರ್ಥತೆಯಿಂದ, ಶ್ರದ್ಧೆಯಿಂದ, ನಿಷ್ಠೆಯಿಂದ ಸಲ್ಲಿಸಿದರು. ಅವರ ದೇಶಾಭಿಮಾನ ಯಾವ ಉಗ್ರವಾದಿಗಳ ದೇಶಾಭಿಮಾನಕ್ಕೂ ಕಡೆಯಾದುದಲ್ಲ. ಆದುದರಿಂದಲೇ ಮಹಾತ್ಮಗಾಂಧೀಜಿ ಅವರನ್ನು ಗುರುವಾಗಿ ಸ್ವೀಕರಿಸಿದ್ದು. ಗುರುವಿನ ಉದ್ದೇಶ ಶಿಷ್ಯನಿಂದ ಈಡೇರಿತು.

ಆದುದರಿಂದ ಗೋಪಾಲಕೃಷ್ಣ ಗೋಖಲೆಯವರು ಚಿರಸ್ಮರಣೀಯರು. ಅವರ ತ್ಯಾಗದಿಂದ, ಅವರ ದುಡಿಮೆಯಿಂದ ನಾವು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಮುಂದೆಯೂ ಅವರ ಜೀವನವನ್ನೇ ಆದರ್ಶವಾಗಿಟ್ಟುಕೊಂಡು ತ್ಯಾಗಶೀಲರಾಗಿ, ಶ್ರದ್ಧಾಳುಗಳಾಗಿ, ಶ್ರಮಜೀವಿಗಳಾಗಿ ಉಜ್ವಲ ದೇಶಾಭಿಮಾನದಿಂದ ಬಾಳಿದರೆ ಈಗ ಪಡೆದಿರುವ ಸ್ವಾತಂತ್ರ್ಯ ಚಿರಕಾಲ ಉಳಿಯುತ್ತದೆ; ಅದನ್ನು ಇಂದೇ ಉಳಿಸಿಕೊಳ್ಳಲು ಪ್ರತಿಜ್ಞೆ ಮಾಡೋಣ!

೨೧-೨-೧೯೬೦

ದೇಜಗೌ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೋಪಾಲಕೃಷ್ಣ ಗೋಖಲೆ

ಸತ್ಯಾಗ್ರಹ ಎನ್ನುವ ಮಾತು ನಮ್ಮ ದೇಶದಲ್ಲಿ ಈಗ ಮನೆ ಮಾತಾಗಿದೆ. ಅದು ಕೇವಲ ನಾಲ್ಕು ಅಕ್ಷರಗತ ಪದವಲ್ಲ. ನೂರಾರು ವರ್ಷಗಳ ದಾಸ್ಯವನ್ನು ನೀಗಿ ಭರತಖಂಡಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಶಕ್ತಿ ಅದು. ಆ ಹೆಸರು ಮೊದಲು ಬೆಳಕು ಕಂಡದ್ದು ಇಲ್ಲಲ್ಲ, ದಕ್ಷಿಣ ಆಫ್ರಿಕಾದಲ್ಲಿ. ಭಾರತದ ಭಾಗ್ಯ ವಿಧಾತನಾದ ಮಹಾತ್ಮ ಗಾಂಧೀಜಿ ಆ ಶಕ್ತಿಯ ಜನಕ.

ಗಾಂಧೀಜಿ ದಕ್ಷಿಣ ಆಫ್ರಿಕಾಕ್ಕೆ ಹೋದದ್ದು ವಕೀಲಿ ಕೆಲಸಕ್ಕಾಗಿ, ಜೀವನ ಸಂಪಾದನೆಗಾಗಿ. ಆದರೆ ಅವರಿಗಾಗಿ ಅಲ್ಲಿ ಕಾದಿದ್ದ ಅದೃಷ್ಟವೇ ಬೇರೆ. ಒಮ್ಮೆ ಅವರು ರೈಲಿನಲ್ಲಿ ಪ್ರಯಾಣ ಮಾಡಿದಾಗ ಬಿಳಿಯರಿಂದ ಒದಗಿದ ಅವಮಾನ ಪ್ರಸಂಗವು ಅಲ್ಲಿಯ ಭಾರತೀಯರ ಸಮಸ್ಯೆಯ ಕಡೆಗೆ ಅವರ ಮನಸ್ಸನ್ನು ಸೆಳೆಯಿತು. ಆ ಬಿಳಿಯರು ಭಾರತೀಯರಿಗೆ ಕೊಡುತ್ತಿದ್ದ ಕಿರುಕುಳ ಇಡೀ ಭರತಖಂಡದ ಆತ್ಮಗೌರವಕ್ಕೇ ಧಕ್ಕೆ ತರುವಂಥದಾಗಿತ್ತು. ತನ್ನ ನಾಡಿನ, ತನ್ನ ಜನರ ಆತ್ಮಗೌರವವನ್ನು ಕಾಪಾಡುವುದಕ್ಕಾಗಿ ಗಾಂಧೀಜಿ ಪಣತೊಟ್ಟರು; ವಕೀಲಿ ವೃತ್ತಿಯನ್ನು ಬಿಟ್ಟರು. ಅಲ್ಲಿಯ ಭಾರತೀಯರೆಲ್ಲರ ಸಂಘಟನೆಗೆ ಶ್ರಮಿಸಿದರು. ಅಲ್ಲಿಯ ಸರ್ಕಾರದೊಡನೆ ಸಂಧಾನ ನಡೆಸಿ ವಿಫಲರಾದರು.

ಆ ಹೊತ್ತಿಗಾಗಲೆ ಭರತಖಂಡದಲ್ಲಿ ಕಾಂಗ್ರೆಸ್ ಸಂಸ್ಥೆ ಹುಟ್ಟಿ ೪೦ ವರ್ಷಗಳಾಗಿತ್ತು. ಸ್ವಾತಂತ್ರ್ಯ ಸಂಪಾದನೆಯೇ ಆ ಸಂಸ್ಥೆಯ ಗುರಿಯಾಗಿತ್ತು. ಅನೇಕ ರಾಷ್ಟ್ರೀಯ ಪಟುಗಳು ಆ ಸಂಸ್ಥೆಯ ಮೂಲಕ ನಾಡಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಘೋರ ಸಂಕಟವನ್ನು ಇಲ್ಲಿಯ ಜನರ ಮತ್ತು ಜನನಾಯಕರ ಗಮನಕ್ಕೆ ತಂದು, ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲಕವಾದರೂ ಪರಿಹಾರವನ್ನು ಒದಗಿಸುವ ಉದ್ದೇಶದಿಂದ ಗಾಂಧೀಜಿ ತಾಯ್ನಾಡಿಗೆ ಮರಳಿದರು. ಆ ಹೊತ್ತಿಗೆ ಅವರಿನ್ನೂ ಮಹಾತ್ಮರಾಗಿರಲಿಲ್ಲ. ಆದುದರಿಂದ ಇಲ್ಲಿ ಜನಪ್ರಿಯರಾಗಿದ್ದ ನಾಯಕರನ್ನು ಆಶ್ರಯಿಸಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳ ಬೇಕಾಯಿತು. ಪುಣೆಯ ಕಡೆಗೆ ಅವರ ಮನಸ್ಸು ಹರಿಯಿತು; ಮನಸ್ಸು ಹರಿದತ್ತ ಕಾಲು ಹರಿದುವು.

ಅಲ್ಲಿ ಅವರಿಗೆ ಆದರದ ಸ್ವಾಗತ ದೊರೆಯಿತು. ಪೂರ್ವ ಜನ್ಮದ ಬಾಂಧವ್ಯ ಮರುಕೊಳಿಸಿದಂತೆ ಕಂಡಿತು. ಅಲ್ಲಿ ಅವರ ಭವಿಷ್ಯದ ಬೆಳಕು ಕಣ್ದೆರೆಯಿತು. ಅಲ್ಲಿ ಅವರು ತಮ್ಮ ರಾಜ ಕೀಯ ಗುರುವನ್ನು ಕಂಡರು. ಅವರನ್ನು ನೋಡಿದಾಗ ಗಂಗೆಯ ವಕ್ಷಸ್ಥಳವನ್ನು ಸೇರಿದ ಅನುಭವವಾಯಿತಂತೆ; ತಮ್ಮ ಅಣ್ಣನನ್ನು ಸೇರಿದಂತಾಯಿತಂತೆ. ಅನಂತರ ಅವರ ಹತ್ತಿರ ಎಷ್ಟೋ ದಿನ ಗಳನ್ನು ಕಳೆದರು; ರಾಜಕೀಯದ ಪ್ರಥಮ ಪಾಠವನ್ನು ಕಲಿತರು. ಅವರ ಮೂಲಕ ಅನೇಕ ಜನನಾಯಕರ ಪರಿಚಯವನ್ನು ಪಡೆದರು. ಮುಂದೆ ಗಾಂಧೀಜಿಗೆ ಲಭಿಸಿದ ಅಪಾರವಾದ ಕೀರ್ತಿಗೆ ಅವರೂ ಕಾರಣರಾದರು.

ಗಾಂಧೀಜಿಯ ಆ ರಾಜಕೀಯ ಗುರುಗಳೇ ಗೋಪಾಲಕೃಷ್ಣ ಗೋಖಲೆಯವರು. ಗೋಖಲೆಯವರು ಗಾಂಧೀಜಿಗಿಂತ ನಾಲ್ಕು ವರ್ಷ ಹಿರಿಯವರು. ೧೮೬೬ರಲ್ಲಿ ಬೊಂಬಾಯಿ ಆಧಿಪತ್ಯದ ರತ್ನಗಿರಿ ಜಿಲ್ಲೆಯಲ್ಲಿ ಹುಟ್ಟಿದರು. ಅವರ ತಂದೆತಾಯಿಯರು ತುಂಬ ಬಡವರು. ಆದುದರಿಂದ ಅವರ ವಿದ್ಯಾಭ್ಯಾಸ ಸುಲಲಿತ ವಾಗಿ ಸಾಗಲಿಲ್ಲ. ಬಾಲ್ಯ ವಿದ್ಯಾಭ್ಯಾಸ ಹೇಗೋ ಮುಗಿಯಿತು. ಆದರೆ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಬಡವರ ಪಾಲಿಗೆ ಬಂದು ದಲ್ಲವಷ್ಟೆ. ಆ ಸಮಯಕ್ಕೆ ಸರಿಯಾಗಿ ಅವರ ಅಣ್ಣ ಸಹಾಯಕ್ಕೆ ಬಂದರು. ಅವರು ತಮ್ಮನಿಗಿಂತ ಐದಾರು ವರುಷ ಹಿರಿಯರು. ತಮ್ಮನನ್ನು ಓದಿಸುವ ಸಲುವಾಗಿ ತಮ್ಮ ವಿದ್ಯಾಭ್ಯಾಸವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊಟಕು ಮಾಡಿದರು. ಸಂಸಾರದ ಹೊರೆಯನ್ನು ನಿರ್ವಹಿಸುವ ಸಲುವಾಗಿ ಸರ್ಕಾರಿ ನೌಕರಿಗೆ ಸೇರಿದರು. ಸಂಸಾರದ ಖರ್ಚನ್ನು ಆದಷ್ಟು ಕಡಿಮೆ ಮಾಡಿ ತಮ್ಮನಿಗೆ ಹಣ ಒದಗಿಸುತ್ತಿದ್ದರು. ಅಣ್ಣನ



ನಿರ್ವ್ಯಾಜವಾತ್ಸಲ್ಯವನ್ನೂ ಅಪಾರ ಸಹಾಯವನ್ನೂ ಗೋಖಲೆಯವರು ಎಂದೆಂದಿಗೂ ಮರೆಯಲಿಲ್ಲ. ಆ ಮೇಲೆ ಅಣ್ಣನ ಮಕ್ಕಳನ್ನು ಓದಿಸಿ, ಬೆಳೆಸಿ ಮುಂದಕ್ಕೆ ತಂದರು.

Sri Vidyabharathi Book Centre, Sringeri

ಗೋಖಲೆಯವರು ಯಾವಾಗಲೂ ಸೋಮಾರಿಯಾಗಿರಲಿಲ್ಲ.

CC-O. In Public Domain. Digitized by eGangotri

ಕಷ್ಟಪಟ್ಟು ಕೆಲಸ ಮಾಡುವುದನ್ನು ಬಾಲ್ಯದಿಂದ ಅಭ್ಯಸಿಸಿದರು. ಸಹ ವಿದ್ಯಾರ್ಥಿಗಳಿಗಿಂತ ಚೆನ್ನಾಗಿ ಓದಬೇಕು, ಯಾವಾಗಲೂ ಅವರ ಮೇಲಿರಬೇಕೆಂಬುದು ಅವರ ಆಸೆ. ಆದುದರಿಂದ ಅವರ ಗೆಳೆಯರು ಆಗಾಗ್ಗೆ 'ಅವನಿಗೆಷ್ಟು ಆಸೆಯಪ್ಪ' ಎನ್ನುತ್ತಿದ್ದರು. ಪಾಠದಲ್ಲಿ ಮಾತ್ರವಲ್ಲ, ಆಟಪಲ್ಲಿಯೂ ಹಾಗೆಯೇ, ಎಲ್ಲಿಯೂ ಅವರದೇ ಮೇಲುಗೈ. ಅವರಿಗೆ ಅಸಾಧಾರಣವಾದ ಜ್ಞಾಪಕಶಕ್ತಿ ಇತ್ತು. ಅದು ಶಾಲೆಯ ಹುಡುಗರೆಲ್ಲರ ಬಾಯಿಮಾತಾಗಿತ್ತು. ಪಠ್ಯ ಪುಸ್ತಕ ಗಳ ಪಾಠಗಳೆಲ್ಲ ತುದಿನಾಲಗೆಯಲ್ಲಿರುತ್ತಿದ್ದುವಂತೆ. ಆಂಗ್ಲವಾಗ್ಮಿ ಬರ್ಕನ ಭಾಷಣಗಳನ್ನು ಮೊದಲಿಂದ ಕೊನೆಯ ತನಕ ನಿರರ್ಗಳವಾಗಿ ಹೇಳಿಬಿಡುತ್ತಿದ್ದರಂತೆ. ಅವರ ಜ್ಞಾಪಕಶಕ್ತಿಯನ್ನು ಪರೀಕ್ಷಿಸಲು ಅವರು ಓದಿದ್ದ ಯಾವುದಾದರೂ ಒಂದು ಪುಸ್ತಕವನ್ನು ಗೆಳೆಯರು ನೋಡಿಕೊಳ್ಳತಕ್ಕದ್ದು, ಅವರು ಒಂದು ಪದವನ್ನೂ ಬಿಡದೆ ಹೇಳ ತಕ್ಕದ್ದು, ಒಂದು ಪದ ತಪ್ಪಿದರೆ ಒಂದಾಣೆ ತಪ್ಪು ಕೊಡತಕ್ಕದ್ದು, ಹೀಗೆ ನಿರ್ಣಯವನ್ನು ಮಾಡಿಕೊಳ್ಳುತ್ತಿದ್ದರಂತೆ. ಆದರೆ ಅದರಿಂದ ಯಾರಿಗೂ ಲಾಭ ದೊರೆಯುತ್ತಿರಲಿಲ್ಲ.

ಗಾಂಧೀಜಿಯವರಂತೆ ಅವರೂ ಬಾಲ್ಯದಿಂದಲೂ ಸುಳ್ಳು ಹೇಳುತ್ತಿರಲಿಲ್ಲ. ಒಮ್ಮೆ ಉಪಾಧ್ಯಾಯರು ಮನೆಯಲ್ಲಿ ಮಾಡಲು ಲೆಕ್ಕ ಕೊಟ್ಟಿದ್ದರು. ಮಾರನೆಯ ದಿನ ಉಪಾಧ್ಯಾಯರು ಕೇಳ ಲಾಗಿ ಗೋಖಲೆಯವರು ಬಿಟ್ಟು ಉಳಿದವರು ಯಾರೂ ಲೆಕ್ಕವನ್ನು ತೋರಿಸಲಿಲ್ಲ. ಉಪಾಧ್ಯಾಯರು ಗೋಖಲೆಯವರನ್ನು ಮೆಚ್ಚಿ ಎಲ್ಲರಿಗಿಂತ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ಆದರೆ ಗೋಖಲೆಯವರು ತಮ್ಮ ಜಾಗವನ್ನು ಬಿಟ್ಟು ಏಳದೆ ಕುಳಿತಲ್ಲಿಂದಲೆ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದರಂತೆ. ಉಪಾಧ್ಯಾಯರು ಅವರ ಅಳುವಿಗೆ ಕಾರಣವನ್ನು ಕೇಳಿದಾಗ, ತಾನು ಆ ಲೆಕ್ಕವನ್ನು ಮಾಡ ಲಿಲ್ಲವೆಂದೂ, ಮೇಲ್ತರಗತಿಯ ಮತ್ತೊಬ್ಬ ಗೆಳೆಯ ಮಾಡಿಕೊಟ್ಟ ನೆಂದೂ, ಆದುದರಿಂದ ಮೇಲಿನ ಸ್ಥಾನದಲ್ಲಿ ಕುಳಿತುಕೊಳ್ಳಲು

Sri Vidyabharathi Book Centre, Sringeri

CC-O. In Public Domain. Digitized by eGangotri

ತಾನು ಅರ್ಹನಲ್ಲವೆಂದೂ ಉತ್ತರ ಕೊಟ್ಟರು.

ಗೋಖಲೆಯವರು ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿಯೂ ಪುಣೆಯ ದಕ್ಕನ್ ಕಾಲೇಜಿನಲ್ಲಿಯೂ ಅನಂತರ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿಯೂ ಓದಿ ಬಿ. ಎ. ಪದವಿಯನ್ನು ಪಡೆದರು. ಆಗ ಅವರಿಗೆ ಕೇವಲ ೧೮ ವರ್ಷವಾಗಿತ್ತು. ಕಾಲೇಜಿನಲ್ಲಿದ್ದಾಗ ಹಿರಿಯ ಆಂಗ್ಲ ಕವಿ ವರ್ಡ್ಸ್‌ವರ್ತನ ಮೊಮ್ಮಗ, ಡಾ|| ವರ್ಡ್ಸ್‌ವರ್ತರು ಅವರ ಗುರುಗಳಾಗಿದ್ದರು. ವಿದ್ಯಾರ್ಥಿದೆಸೆಯಲ್ಲಿ ಗೋಖಲೆಯವರ ಮನಸ್ಸಿನ ಮೇಲೆ ಅವರಂತೆ ಪ್ರಭಾವ ಬೀರಿದವರು ಮತ್ತೊಬ್ಬರಿರಲಿಲ್ಲ. ಬಿ. ಎ. ಪದವಿ ಪಡೆದ ಮೇಲೆ ಅವರ ಗಮನ ಇಂಜಿನಿಯರಿಂಗ್ ಕಾಲೇಜಿನ ಕಡೆಗೆ ಹರಿಯಿತು. ಅಲ್ಲಿ ಕೆಲವು ದಿನ ಇದ್ದು, ಅದು ಒಗ್ಗದೆ, ಲಾ ತರಗತಿಗೆ ಸೇರಿದರು. ಅಲ್ಲಿ ಮೊದಲನೆಯ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆಯಾದರೂ ಎರಡನೆಯ ವರ್ಷದ ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ. ಲಾ ಪರೀಕ್ಷೆಯನ್ನು ಪೂರೈಸಬೇಕಾಗಿತ್ತೆಂದು ಕೊನೆಯತನಕ ಅಂದುಕೊಳ್ಳುತ್ತಿದ್ದರು.

ವಿದ್ಯಾಭ್ಯಾಸ ಮುಗಿದ ಕೂಡಲೆ ಗೋಖಲೆಯವರು ಉಪಾಧ್ಯಾಯವೃತ್ತಿಗಿಳಿದರು. ಜನತಾಸೇವೆಯೇ ಮುಖ್ಯಗುರಿಯಾಗುಳ್ಳ ಕೆಲವರು ಸೇವಾಧುರೀಣರು ಉಚ್ಚಶಿಕ್ಷಣ ಬಡವರಿಗೂ ಎಟುಕುವಂತೆ ಏರ್ಪಡಿಸುವುದಕ್ಕಾಗಿ ಪುಣೆಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದರು. ಅದೇ ಡೆಕ್ಕನ್ ಎಜುಕೇಷನ್ ಸೊಸೈಟಿ. ಪ್ರತಿಯೊಬ್ಬರೂ ಇಪ್ಪತ್ತು ವರ್ಷಗಳ ಕಾಲ ಕೇವಲ ಎಪ್ಪತ್ತೈದು ರೂಪಾಯಿನ ತಲಬಿನ ಮೇಲೆ ಕೆಲಸ ಮಾಡುವುದಾಗಿ ಆ ಸಂಸ್ಥೆಯ ಸದಸ್ಯರು ಪ್ರತಿಜ್ಞೆಯನ್ನು ಕೊಟ್ಟಿದ್ದರು. ನಿಯತ ಮೊಬಲಗನ್ನು ಬಿಟ್ಟು ಹೆಚ್ಚಿಗೆ ಒಂದು ಬಿಡುಗಾಸನ್ನೂ ಕೇಳುವಂತಿರಲಿಲ್ಲ. ಆ ಸಂಸ್ಥೆ ಇಂದಿಗೂ ದೇಶಾಭಿಮಾನದ, ತ್ಯಾಗದ ಸಂಕೇತವಾಗಿ ಮೆರೆಯುತ್ತಿದೆ. ಗೋಖಲೆಯವರು ಆ ಸಂಸ್ಥೆಯನ್ನು ಸೇರಿ ಕಾಯಾವಾಚಾ ಮನಸಾ ಸೇವೆಯನ್ನು ಸಲ್ಲಿಸಿದರು. ಗಣಿತದ ಉಪಾಧ್ಯಾಯರಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇರಿದವರು ಆಂಗ್ಲಭಾಷೆಯನ್ನು ಕಲಿಸುತ್ತಿದ್ದರು. ಕೊನೆಗೆ ಇತಿಹಾಸ ಮತ್ತು ಅರ್ಥಶಾಸ್ತ್ರಗಳ ಪ್ರಾಧ್ಯಾಪಕರಾಗಿ ನಿಂತರು. ಶಿಷ್ಯರಿಗಾಗಿ ಅವರು ಹಗಲಿರುಳೂ ದುಡಿಯುತ್ತಿದ್ದರು. ಯಾವ ಪಾಠವನ್ನೇ ಆಗಲಿ ಅವರು ಅತ್ಯಂತ ದಕ್ಷತೆಯಿಂದ ಮಾಡುತ್ತಿದ್ದರಂತೆ. ಉಪಾಧ್ಯಾಯವೃತ್ತಿಯ ಜೊತೆಗೆ ಕಾಲೇಜಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಗುರುತರವಾದ ಭಾರವನ್ನು ಅವರು ಹೊತ್ತಿದ್ದರು. ದಕ್ಷಿಣ ಭಾರತವನ್ನೆಲ್ಲಾ ಸುತ್ತಿ ಹಣವನ್ನು ಎತ್ತಬೇಕಾಗಿತ್ತು. ಆ ಸಂಸ್ಥೆಯ ಮುಖ್ಯಾಧಿಕಾರಿಯಾಗುವ ಅವಕಾಶವಿದ್ದರೂ ಅವರೆಂದೂ ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ತಾನೂ ಇತರ ಉಪಾಧ್ಯಾಯರಲ್ಲಿ ಒಬ್ಬನೆನಿಸಿಕೊಳ್ಳಲು ಹೆಮ್ಮೆ ಪಡುತ್ತಿದ್ದರು. ಆದರೆ ಆ ಸಂಸ್ಥೆಯ ಆಡಳಿತ ವಸ್ತುತಃ ಅವರನ್ನೇ ಅವಲಬಿಂಸಿತು.

ಫರ್ಗ್ಯುಸನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗಲೇ ಅವರಿಗೆ ರಾನಡೆಯವರ ಪರಿಚಯ ಆದದ್ದು. ಆ ಕಾಲದಲ್ಲಿ ರಾನಡೆಯವರು ಋಷಿಯೆಂದು ಪ್ರಕೀರ್ತಿತರಾಗಿದ್ದರು. ಅವರು ಉಜ್ಜ್ವಲ ದೇಶಾಭಿಮಾನಿಗಳು, ಅದ್ವಿತೀಯ ಪಂಡಿತರು. ಸಾರ್ವಜನಿಕ ಜೀವನದಲ್ಲಿ ಆಧ್ಯಾತ್ಮಿಕ ಶಕ್ತಿ ಪ್ರವಹಿಸಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತಿದ್ದರು. ಗೋಖಲೆಯವರು ಅವರ ಪ್ರಭಾವಕ್ಕೊಳಗಾದರು. ಅವರ ಪಾದಮೂಲದಲ್ಲಿ ಕುಳಿತು ಅರ್ಥಶಾಸ್ತ್ರವನ್ನು ಅಭ್ಯಸಿಸಿದರು. ಸಾರ್ವಜನಿಕ ಸೇವೆಗೆ ಅರ್ಹತೆಯನ್ನು ಸಂಪಾದಿಸಿದರು. ಗುರುವೆಂದು ಸಾರಿದರು. ಯಾವ ಕೆಲಸವನ್ನು ಮಾಡಬೇಕಾದರೂ ಮೊದಲು ಗುರುವಿಗೆ ಭಕ್ತಿಯ ಹೂವನ್ನು ಅರ್ಪಿಸಿ, ಆ ಕೆಲಸವನ್ನು ಆರಂಭಿಸುತ್ತಿದ್ದರು. ಅವರು ಮೊಟ್ಟಮೊದಲು ಸಾರ್ವಜನಿಕ ರಂಗಕ್ಕಿಳಿದುದೂ ರಾನಡೆಯವರ ಪ್ರೇರಣೆಯಿಂದಲೇ ೧೮೮೮ರಲ್ಲಿ. ಸಾರ್ವಜನಿಕ ಸಭೆಯ ಕಾರ್ಯದರ್ಶಿಯಾಗಿ, ಆ ಸಂಸ್ಥೆ ನಡೆಸುತ್ತಿದ್ದ ತ್ರೈಮಾಸಿಕಕ್ಕೆ ಸಂಪಾದಕರಾದರು. ಆಗಾಗ್ಗೆ ಸಮಾಜ ಸೇವೆಯನ್ನು ಕುರಿತು ಲೇಖನಗಳನ್ನು ಪ್ರಕಟಿಸುತ್ತಿದ್ದರು. ಆ ಕೆಲಸಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೊತೆಗೆ ಡೆಕ್ಕನ್ ಎಜುಕೇಷನ್ ಸೊಸೈಟಿಯ ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿ ಗುರುತರವಾದ ಹೊಣೆಯನ್ನು ನಿರ್ವಹಿಸಬೇಕಾಗಿತ್ತು.

೧೮೯೭ರ ಹೊತ್ತಿಗೆ ಗೋಖಲೆಯವರು ಸಾರ್ವಜನಿಕ ಸೇವೆಯಲ್ಲಿ ಅದ್ವಿತೀಯರೆಂದು ಖ್ಯಾತರಾದರು. ಅವರ ಹೆಸರು ನಾಡಿನ ಮೂಲೆ ಮೂಲೆಗಳಿಗೆಲ್ಲ ಹಬ್ಬಿತು. ಅವರು ಕೈಕೊಂಡ ಕಾರ್ಯಗಳಲ್ಲಿ ತೋರಿಸಿದ ಶ್ರದ್ಧಾ ಸಕ್ತಿ, ಪ್ರಾಮಾಣಿಕ ಗುಣಗಳೇ ಅವರನ್ನು ಮುಂದಕ್ಕೆ ತಂದುವು. ಆದುದರಿಂದಲೇ ಗಾಂಧೀಜಿ ದಕ್ಷಿಣ ಆಫ್ರಿಕದ ಭಾರತೀಯರ ಸಮಸ್ಯೆಯನ್ನು ಮೊಟ್ಟಮೊದಲು ಗೋಖಲೆಯವರ ಮುಂದಿಟ್ಟರು. ಅದೇ ಸಮಯಕ್ಕೆ ಸರಿಯಾಗಿ ಭರತಖಂಡದ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲಿಸುವುದಕ್ಕಾಗಿ ಬ್ರಿಟಿಷ್ ಸರಕಾರ ಒಂದು ಸಮಿತಿಯನ್ನು ನೇಮಿಸಿತು. ಯಾವ ಬಾಬುಗಳಿಗೆ ಬ್ರಿಟಿಷ್ ಸರಕಾರದ ಕೋಶದ ದುಡ್ಡು ತೆರಬೇಕಾಗಿತ್ತೋ ಅವುಗಳಿಗೆಲ್ಲ ಭಾರತ ಸರ್ಕಾರದ ಕೋಶವೇ ತೆರುತ್ತಿತ್ತೆಂಬ ಸಂಶಯ ಎಲ್ಲೆಲ್ಲೂ ಹರಡಿತ್ತು. ಅದರ ಸತ್ಯಾಸತ್ಯತೆಯನ್ನು ನಿರ್ಧರಿಸುವುದೇ ಆ ಸಮಿತಿಯ ಉದ್ದೇಶವಾಗಿತ್ತು. ಆ ಸಮಿತಿಯ ಮುಂದೆ ಸಾಕ್ಷ್ಯ ನೀಡಲು ಭಾರತೀಯರ ಪರವಾಗಿ ಕೆಲವರು ಬುದ್ಧಿವಂತರು ಹೋಗಬೇಕಾಗಿತ್ತು. ಹಾಗೆ ಇಂಗ್ಲೆಂಡಿಗೆ ಹೋದ ಮೂರು ನಾಲ್ಕು ಮಂದಿಯಲ್ಲಿ ಗೋಖಲೆಯವರೂ ಒಬ್ಬರು. ಆರ್ಥಿಕ ವಿಷಯದಲ್ಲಿ ಅವರು ಅಧಿಕಾರವಾಣಿಯಿಂದ ಮಾತಾಡುತ್ತಿದ್ದರು. ಸಾಕಾದಷ್ಟು ಅಂಕಿ ಅಂಶ ನಿದರ್ಶನಗಳನ್ನು ಕೂಡಿಟ್ಟುಕೊಳ್ಳುತ್ತಿದ್ದುದರಿಂದ ಎದುರಾಳಿಗಳು ನಿರುತ್ತರರಾಗುತ್ತಿದ್ದರು. ಬ್ರಿಟಿಷ್ ಸರ್ಕಾರ ಭಾರತೀಯರ ಮೇಲೆ ಹೇರುತ್ತಿದ್ದ ಸುಂಕಭಾರಿಗೆಗಳು ಹೆಚ್ಚೆಂದೂ ಯುದ್ಧಕ್ಕೆ ಸಂಬಂಧಪಟ್ಟ ವೆಚ್ಚಗಳಿಗೆ ಇಲ್ಲಿಯ ಕೋಶದಿಂದ ಹಣ ತೆಗೆಯುವುದು ಸಲ್ಲದೆಂದೂ ಅವರು ಆ ಸಮಿತಿಯ ಮುಂದೆ ವಾದಿಸಿದರು. ಅವರ ವಾದದ ಸರಣಿಯನ್ನು ಬದ್ವೆತ್ತಿನ್ನ ಆಂಗ್ಲರಾದಿಯಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೇಕ ವಿದ್ವಾಂಸರು ಮೆಚ್ಚಿ ಕೊಂಡಾಡಿದರು.

ಮಾನವನ ಜೀವನ ಹೂವಿನ ಹಾಸುಗೆಯಲ್ಲ. ಕ್ಷಣಕ್ಷಣಕ್ಕೂ ಕಷ್ಟ ಕಾರ್ಪಣ್ಯಗಳು ಅವನನ್ನು ಎದುರಿಸಿ, ಹಿಂಡಿ ಹಿಪ್ಪೆ ಮಾಡುತ್ತವೆ. ಅವನ್ನು ಧೈರ್ಯದಿಂದ ಪ್ರತಿಭಟಿಸಿ ಗೆದ್ದರೆ ಮಾನವತ್ವ ಪ್ರಕಾಶಗೊಳ್ಳುತ್ತದೆ. ರಾಜಕೀಯ ಕ್ಷೇತ್ರದಲ್ಲಂತೂ ಅಡಿಗಡಿಗೂ ತೊಂದರೆ ಕಾದಿರುತ್ತದೆ. ಈ ದಿನ ನಾಡಿಗೆ ನಾಡೇ ಒಬ್ಬ ವ್ಯಕ್ತಿಯನ್ನು ಹೊಗಳಬಹುದು; ನಾಳೆ ಅದೇ ಜನ ಅವನ ಮೇಲೆ ಕಲ್ಲೆಸೆಯುಬಹುದು. ಗೋಖಲೆ ಇಂಗ್ಲೆಂಡಿನಲ್ಲಿದ್ದಾಗಲೇ ಒಂದು ಕಹಿ ಪ್ರಸಂಗ ಜರುಗಿತು. ಬೊಂಬಾಯಿ ಮತ್ತು ಪೂನಾ ನಗರಗಳಲ್ಲಿ ಮೊಟ್ಟಮೊದಲನೆಯ ಸಾರಿ ಪ್ಲೇಗು ಕಾಣಿಸಿಕೊಂಡಿತು. ಅದರ ಹಾವಳಿಗೆ ಅನೇಕ ಮಂದಿ ತುತ್ತಾದರು. ಎಲ್ಲೆಲ್ಲೂ ಹಾಹಾಕಾರವೆದ್ದಿತು. ಜನರಿಗಾಗಲೀ ಸರ್ಕಾರಕ್ಕಾಗಲೀ ಮೊದಮೊದಲು ಏನು ಮಾಡಬೇಕೆಂಬುದೇ ತೋಚಲಿಲ್ಲ. ಸರ್ಕಾರದ ತಾಟಸ್ಥ್ಯ ಮನೋಭಾವ ಜನರ ಕಳವಳವನ್ನು ದ್ವಿಗುಣಗೊಳಿಸಿತು. ಸರಿ, ಅದರ ಪರಿಣಾಮವಾಗಿ ವಿರಸ ಅಂಕುರಿಸಿತು. ಒಬ್ಬಿಬ್ಬರು ಬಿಳಿಯರ ಕೊಲೆಯೂ ಆಗಿಹೋಯಿತು. ಪ್ಲೇಗ್ ನಿವಾರಣೆಗೆ ಊರು ಬಿಡುವುದೇ ದಾರಿಯೆಂದು ಆಗಿನ ನಂಬಿಕೆ. ಬಿಳಿಯ ಸೈನಿಕರನ್ನು ಊರು ಬಿಡಿಸುವ ಕೆಲಸಕ್ಕೆ ಸರ್ಕಾರ ನೇಮಿಸಿತು. ಆ ಸಂದರ್ಭದಲ್ಲಿ ಒಬ್ಬಿಬ್ಬರು ಹೆಂಗಸರನ್ನು ಆ ಸೈನಿಕರು ಅವಮಾನಗೊಳಿಸಿದರೆಂಬ ವದಂತಿಯೂ ಹಬ್ಬಿತು. ಆ ವದಂತಿ ಗೋಖಲೆಯ ಕಿವಿಗೂ ಬಿದ್ದಿತು. ಆಗ ಅವರ ಮನಸ್ಸಿನಲ್ಲಿ ಆದ ಯಾತನೆ ಅಷ್ಟಿಷ್ಟಲ್ಲ. ಇಂಗ್ಲೆಂಡಿನ ಗೆಳೆಯರೊಡನೆ ಈ ವಿಷಯವನ್ನು ಪ್ರಸ್ತಾಪಿಸಿದರು. ಅವರ ಸಲಹೆಯ ಮೇರೆಗೆ ಶಾಸನ ಸಭೆಯ ಸದಸ್ಯರನ್ನು ಕಂಡು ತಾವು ತರಿಸಿಕೊಂಡಿದ್ದ ವರದಿಯನ್ನು ಒಪ್ಪಿಸಿದರು. ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟರು. ಮೊದಲು ಅವರು ಎಣಿಸಿದ್ದದ್ದೊಂದಾದರೆ ಕೊನೆಗೆ ಆದದ್ದೇ ಬೇರೆಯಾಯಿತು. ಗೋಖಲೆಯರ ವಿಷಯದಲ್ಲಿ ಎಲ್ಲೆಲ್ಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂದೇಹ ಹಬ್ಬಿತು. ಆಗದವರು ಸೇಡಿನ ಓಡಿಸುದ್ದನ್ನು ಎಸೆದರು. ಆಗ ಬೊಂಬಾಯಿ ಪ್ರಾಂತ್ಯದ ಗೌರ್ನರ್ ಆಗಿದ್ದ ಸ್ಯಾಂಡ್ ಹರ್ಸ್ಟರು ಗೋಖಲೆಯವರ ಹೇಳಿಕೆಯನ್ನು ಪ್ರತಿಭಟಿಸಿ, ಅದು ದುರುದ್ದೇಶದಿಂದ ಕೂಡಿದುದೆಂದೂ ಸತ್ಯಕ್ಕೆ ದೂರವಾದುದೆಂದೂ ಸಾಧಿಸಿ ಮನೆ ಮನೆಯಾಗಿ ದೂರಿದರು. ಬಿಳಿಯರು ಹಳಿಯುವು ದಿರಲಿ, ಭಾರತೀಯರು ಅವರ ಸಂಗಾತಿಗಳಾದರು. ಆ ಪ್ರಸಂಗ ವನ್ನು ಹಾಗೆ ವರದಿ ಮಾಡಿದವರು ಯಾರೆಂದು ಸರ್ಕಾರ ಗೋಖಲೆ ಯವರನ್ನು ಕೇಳಿತು. ವರದಿಗಾರನ ಹೆಸರನ್ನು ಹೊರಡಿಸುವುದಿಲ್ಲ ವೆಂದು ಮೊದಲೇ ಮಾತು ಕೊಟ್ಟಿದ್ದರಿಂದ, ಇಡೀ ಘಟನೆಯ ಹೊಣೆ ಯನ್ನು ತಾವೇ ಹೊತ್ತರು. ಅಂಕೆಯಿಲ್ಲದ ಜನ ಅವರನ್ನು ಮತ್ತಷ್ಟು ಬೈದರು. ಗೋಖಲೆಯವರು ನಾಚಿಕೆಯಿಂದ ತಲೆ ತಗ್ಗಿಸುವಂತಾ ಯಿತು. ಸ್ವದೇಶಕ್ಕೆ ಬಂದ ಮೇಲೆ ಎಲ್ಲರೂ ಅವರನ್ನು ಸಂದೇಹ ದಿಂದ, ಜುಗುಪ್ಸೆಯಿಂದ ನೋಡುವುದಕ್ಕೆ ಮೊದಲು ಮಾಡಿದರು. ಸಹಾನುಭೂತಿಯನ್ನು ತೋರಿಸುವವರೇ ಇಲ್ಲವಾದರು. ಆಗಿನ ಪರಿ ಸ್ಥಿತಿಯಲ್ಲಿ ಕ್ಷಮಾಯಾಚನೆಯೇ ಸರಿಯಾದ ಮಾರ್ಗವೆಂದು ತೋರಿತು. ಪ್ರಾಮಾಣಿಕನಾದ ಯೋಧನಂತೆ ಬಹಿರಂಗ ಪತ್ರದ ಮೂಲಕ ತಪ್ಪನ್ನು ಒಪ್ಪಿಕೊಂಡು, ಕ್ಷಮೆಯನ್ನು ಯಾಚಿಸಿದರು. ಅದೇ ಸಂದರ್ಭವನ್ನು ಉಪಯೋಗಿಸಿಕೊಂಡು ಗೌರ್ನರರು ಗೋಖಲೆ ಯವರನ್ನು ಮತ್ತಷ್ಟು ದೂರಿದರು. ಅದೇ ವರ್ಷ ಅಮರಾವತಿ ಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಗೋಖಲೆಯವರು ಹೋದರು. ಅಲ್ಲಿ ಅವರಿಗೆ ದೊರೆತ ಬಹುಮಾನವೇನೆಂದರೆ ಅವ ಹೇಳನ, ತಿರಸ್ಕಾರ.

ಈ ಘಟನಾಪರಂಪರೆ ಗೋಖಲೆಯವರ ಎದೆಯನ್ನು ಕೊರೆ ದರೂ ಅವರು ಎದೆಗೆಡಲಿಲ್ಲ. ಮಾರನೆಯ ವರ್ಷವೂ ಪ್ಲೇಗು ಕಾಣಿಸಿಕೊಂಡಿತು. ಗೋಖಲೆಯವರು ಸ್ವಯಂಸೇವಕ ದಳವೊಂ ದನ್ನು ಸಂಘಟಿಸಿ, ಮನೆಮನೆಗೂ ಹೋಗಿ ಶುಶ್ರೂಷೆಯನ್ನು ಸಲ್ಲಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದರು. ಹಿಂದಿನ ಸಾರಿ ಮನಸಾರೆ ದೂರಿದ್ದ ಜನತೆ ಈ ಸಾರಿ ಎದೆಯಾರೆ ಹೊಗಳಿತು. ಸ್ಯಾಂಡ್‌ಹರ್ಸ್ಟ್ ಸಾಹೇಬರು ಮುಕ್ತ ಕಂಠದಿಂದ ಅವರ ಸೇವೆಯನ್ನು ಸ್ಮರಿಸಿ ಗೌರವಿಸಿದರು.

ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಷ್ಟು ಕಾಲ ಅವರು ನಿಷ್ಠೆಯಿಂದ, ಅಭಿಮಾನದಿಂದ ಸೇವೆ ಸಲ್ಲಿಸಿದರು. ಎಡಬಿಡದ ವ್ಯಾಸಂಗ, ಆಲೋಚನೆ, ವಿಚಾರಗಳ ಮೂಲಕ ಅವರು ತಮ್ಮ ಜ್ಞಾನಕೋಶವನ್ನು ಅರಳಿಸಿಕೊಂಡರು. ಅನಂತರ ರಾಜಕೀಯ ಕ್ಷೇತ್ರಕ್ಕೆ ಇಳಿಯುವ ಉದ್ದೇಶದಿಂದ ಉಪಾಧ್ಯಾಯ ವೃತ್ತಿಯನ್ನು ಬಿಡಬೇಕಾಯಿತು. ಇಪ್ಪತ್ತು ವರ್ಷಗಳಿಂದ ಅವರ ಬಾಳಿಗೆ ಅಂಟಿಕೊಂಡು ಬಂದಿದ್ದ ಆ ವೃತ್ತಿಯನ್ನು ಬಿಡುವಾಗ ತುಂಬ ನೊಂದುಕೊಂಡರು. ಆಗ ಕಾಲೇಜಿನ ವಿದ್ಯಾರ್ಥಿಗಳೂ ಅವರ ಸಹೋದ್ಯೋಗಿಗಳೂ ಏರ್ಪಡಿಸಿದ್ದ ಬೀಳ್ಕೊಡಿಗೆಯ ಸಮಾರಂಭದಲ್ಲಿ ಅವರು ಹೇಳಿದ ಮಾತುಗಳು ಗಮನಾರ್ಹವಾಗಿವೆ.

"ಬಹಳ ದಿನಗಳ ಹಿಂದೆ ಸಾಗರದ ದಡದಲ್ಲಿ ಒಬ್ಬ ಮನುಷ್ಯ ಗುಡಿಸಿಲು ಹಾಕಿಕೊಂಡು ವಾಸಿಸುತ್ತಿದ್ದನು. ಗುಡಿಸಿಲಿನ ಸುತ್ತ ಹೊಲ ಗದ್ದೆಗಳಿದ್ದುವು. ಅವುಗಳಿಂದ ಸಾಕಾದಷ್ಟು ಧಾನ್ಯ ಸಿಗುತ್ತಿತ್ತು. ಅವನಿಗೆ ಅಚ್ಚುಮೆಚ್ಚಿನ ಸಂಸಾರವಿತ್ತು. ಅವರು ಸುಖವಾಗಿದ್ದಾರೆಂದು ಪ್ರಪಂಚವೂ ಅರಿತುಕೊಂಡಿತ್ತು. ಆದರೆ ಆ ಮನುಷ್ಯನಿಗೆ ಸಮುದ್ರವನ್ನು ಕಂಡರೆ ಏನೋ ಅತೀನವಾದ ಬಯಕೆ. ಕ್ರಮೇಣ ಬಯಕೆ ಉಲ್ಬಣಿಸಿತು. ದೋಣಿಯನ್ನು ಅಣಿಗೊಳಿಸಿ ಹೊರಟೇಬಿಟ್ಟನು. ಒಂದೆರಡುಸಾರಿ ಅಲೆಗಳು ಅವನನ್ನು ಹಿಂದಕ್ಕೆ ನೂಕಿದುವು. ಆದರೂ ಮುಂದುವರಿದನು. ಕೊನೆಗೆ ಗಂಗಮ್ಮನ ಪಾಲಾದನು. ನನ್ನ ಈಗಿನ ಅವಸ್ಥೆ ಅಂಥದೇ. ಇಲ್ಲಿಯ ತನಕ ಈ ಕಾಲೇಜಿನಲ್ಲಿ ಸುಖವಾಗಿದ್ದೆ. ನಾನು ಮುಂದೆ ಕೈಕೊಳ್ಳಲಿರುವ ಕಾರ್ಯ ಅಪಾಯಕಾರಿಯಾದುದು. [illegible] ಹೆಚ್ಚು ಸೇವೆ ಸಲ್ಲಿಸುವ ಉದ್ದೇಶದಿಂದ ಅದನ್ನು ಕೈಕೊಳ್ಳಲಿದ್ದೇನೆ. ಭವಿಷ್ಯದ ಗರ್ಭ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಏನು ಅಡಗಿದೆಯೋ ಗೊತ್ತಿಲ್ಲ. ಇಂಥ ಕಾರ್ಯವನ್ನು ಕೈಗೊಳ್ಳುವವರೆಲ್ಲರೂ ಧೈರ್ಯದಿಂದ ಒಳ್ಳೆಯ ಆಶೆಯಿಂದ ಮುನ್ನುಗ್ಗಬೇಕಾಗಿದೆ. ಪರಿಣಾಮದ ಕಡೆಗೆ ಗಮನ ಕೊಡಕೂಡದು."

ಕಾಲೇಜನ್ನು ಬಿಟ್ಟಮೇಲೆ ೧೮೯೯ ರಲ್ಲಿ ಬೊಂಬಾಯಿಯ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಸ್ಥಾನ ಬಿಡುವಾಯಿತು. ಆ ಸ್ಥಾನಕ್ಕೆ ಗೋಖಲೆಯವರು ಸ್ಪರ್ಧಿಸಿ ಸುಲಭವಾಗಿ ಜಯ ಪಡೆದರು. ಆ ಜಯದಿಂದ ಅವರು ತೃಪ್ತರಾಗಿ ವಿರಾಮ ಜೀವನವನ್ನು ಸಾಗಿಸಲಿಲ್ಲ. ತಾನು ಜನರ ಪ್ರತಿನಿಧಿ, ಜನರ ಕಷ್ಟ, ಕಾರ್ಪಣ್ಯಗಳ ಪ್ರತಿನಿಧಿ ಎಂದು ಭಾವಿಸಿದರು; ಅಲ್ಲಿ ಇಲ್ಲಿ ತಿರುಗಿ, ಜನರ ಕಷ್ಟಗಳನ್ನು ಅರಿತರು. ಶಾಸನ ಸಭೆಯ ಸದಸ್ಯನಾಗಬೇಕಾದರೆ ಅಸಾಧಾರಣ ಪಾಂಡಿತ್ಯವು ಆವಶ್ಯಕವೆಂದರಿತು ಹಗಲಿರುಳೂ ಓದಿದರು, ದುಡಿದರು. ತಮ್ಮ ವಾದವನ್ನು ಸ್ಥಾಪಿಸುವುದಕ್ಕಾಗಿ ಒಮ್ಮೆ ಇತರಗೆಳೆಯರೊಡನೆ ಸಭಾತ್ಯಾಗವನ್ನು ಮಾಡಿದರು.

ಮೂರನೆಯ ವರ್ಷವೇ ಕೇಂದ್ರ ಶಾಸನ ಸಭೆಯಲ್ಲಿ ಬಿಡುವಾದ ಒಂದು ಸ್ಥಾನಕ್ಕೆ ಗೋಖಲೆಯವರು ಚುನಾಯಿತರಾದರು. ಅವರ ಸೇವಾಕ್ಷೇತ್ರ ವಿಶಾಲವಾಯಿತು. ಅದಕ್ಕೆ ತಕ್ಕಂತೆ ದುಡಿಮೆಯೂ ಹೆಚ್ಚಿತು. ಆದುದರಿಂದ ಇಪ್ಪತ್ತು ವರ್ಷಗಳಿಂದ ನಡೆದು ಬಂದಿದ್ದ ಅಧ್ಯಾಪಕವೃತ್ತಿಯನ್ನು ಅನಿವಾರ್ಯವಾಗಿ ತೊರೆಯಬೇಕಾಯಿತು. ಅವರು ಕೇಂದ್ರ ಶಾಸನ ಸಭೆಯ ಸದಸ್ಯರಾಗಿ ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಅವರು ಅಲ್ಲಿ ಮಾತಾಡದ ವಿಷಯವಿರಲಿಲ್ಲ. ಯಾವ ವಿಷಯವಾದರು ಸರಿಯೆ, ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಹೋಗುತ್ತಿದ್ದರು. ಅವರು ಅಂದು ಬಜೆಟ್ ಮೇಲೆ ಮಾಡಿದ ಭಾಷಣಗಳಂತೂ ಇಂದಿಗೂ ಅನುಕರಣೀಯವಾಗಿವೆ. ಅವರ ಪ್ರಥಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಷಣವೇ ಜನರಿಗೆ ವಿಸ್ಮಯವನ್ನುಂಟುಮಾಡಿತು. ಅವರ ಭಾಷಣವನ್ನು ಕೇಳಲು ಜನರು ಕಿಕ್ಕಿರಿಯುತ್ತಿದ್ದರು. ಅರ್ಥ ಸಚಿವರಂತೂ ಕುತೂಹಲದಿಂದ ಕೇಳುತ್ತಿದ್ದರಲ್ಲದೆ, ಅವರ ಭಾಷಣ ಕಾಲದಲ್ಲಿ ಕಾಗದ-ಬರೆಯುವ ಕಡ್ಡಿಗಳನ್ನು ಹಿಡಿದೇ ಇರುತ್ತಿದ್ದರು. ಗೋಖಲೆಯವರು ಕೊಡುತ್ತಿದ್ದ ಸಲಹೆಗಳನ್ನು ಗಮನಕ್ಕೆ ತಂದುಕೊಂಡು ಕಾರ್ಯರೂಪಕ್ಕೂ ಇಳಿಸುತ್ತಿದ್ದರು. ಉನ್ನತವಾದ ಹುದ್ದೆಗಳಿಗೆ ಭಾರತೀಯರ ನೇಮಕ, ಸೈನ್ಯದ ಖರ್ಚಿನಲ್ಲಿ ಉಳಿತಾಯ, ಉಪ್ಪಿನ ತೆರಿಗೆಯ ವಿಸರ್ಜನೆ, ನಾವೆಗಳ ನಿರ್ಮಾಣ, ಪಾರಿಭಾಷಿಕ ವ್ಯವಸಾಯದ ಬ್ಯಾಂಕುಗಳ ಸ್ಥಾಪನೆ, ನಗರ ನಿರ್ಮಲೀಕರಣ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ಬಲಾತ್ಕಾರ ವಿದ್ಯಾಭ್ಯಾಸ, ಬಡವರ ಋಣ ಪರಿಹಾರ ಯೋಜನೆ ಇವು ಅವರ ಬಡ್ಜೆಟ್ ಭಾಷಣದ ಕೆಲವು ಅಂಶಗಳು. ರಾಷ್ಟ್ರದ ಕ್ಷೇಮ ಮತ್ತು ಆದರ ಸಂಪದಭಿವೃದ್ಧಿಗಳು ವಿದ್ಯಾವಂತರನ್ನವಲಂಬಿಸಿದೆ ಎಂಬುದನ್ನು ಅವರು ಆಗಲೇ ಮನಗಂಡರು. ನಾಡಿನ ಪ್ರತಿಯೊಬ್ಬ ಮಗುವನ್ನೂ ವಿದ್ಯಾವಂತರನ್ನಾಗಿ ಮಾಡುವುದು ರಾಷ್ಟ್ರದ ಕರ್ತವ್ಯವೆಂದು ಸಾರಿದರು. ಅನೇಕ ಸಾರಿ ಉಚಿತ ಬಲಾತ್ಕಾರ ವಿದ್ಯಾಭ್ಯಾಸ ಮಸೂದೆಯನ್ನು ಸಭೆಯ ಮುಂದೆ ತಂದರು. ಅವರ ಮಸೂದೆಗಳಾಗಲೀ ತಿದ್ದುಪಡಿಗಳಾಗಲೀ ಆಗಿನ ಸನ್ನಿವೇಶಗಳಲ್ಲಿ ಹೆಚ್ಚು ಮನ್ನಣೆ ಪಡೆಯುವಂತಿರಲಿಲ್ಲ. ಸೋಲು ಗೆಲುವಿನ ಅಡಿಗಲ್ಲು ಎಂಬುದು ಅವರ ಮೂಲಮಂತ್ರವಾಗಿತ್ತು. ಅವರ ಸೋಲು ಕೇವಲ ಒಬ್ಬ ವ್ಯಕ್ತಿಯ ಸೋಲಲ್ಲ. ಏಕೆಂದರೆ ಆ ಸೋಲುಗಳಿಂದ ಜನತೆಯ ಮೇಲೆ, ಸರ್ಕಾರದ ಮೇಲೆ ಉಂಟಾದ ಪ್ರಭಾವವನ್ನು ಗಣನೆಗೆ ತಂದುಕೊಳ್ಳಬೇಕಾಗುತ್ತದೆ. ನಮ್ಮ ಈಗಿನ ಅಭ್ಯುದಯದ ಹಸುರಿನ ಸೊಂಪಿಗೆ ಅವರ ಆಗಿನ ಸೋಲು (ಒಂದು ರೀತಿಯಲ್ಲಿ) ಕಾರಣವೆನ್ನುವುದನ್ನು ಮರೆಯಬಾರದು.

ಭರತಖಂಡ ಸರ್ವ ವಿಧದಲ್ಲಿಯೂ ಪ್ರಗತಿಪರ ರಾಷ್ಟ್ರವಾಗಬೇಕು. ಭಾರತೀಯರು ಉತ್ತಮ ಜನಾಂಗವಾಗಬೇಕೆಂಬುದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಮುಖದಾಸೆಯಾಗಿತ್ತು. ಅವರ ಸರ್ವ ಸಾಹಸ ಪ್ರಯತ್ನಗಳೆಲ್ಲ ಆ ಒಂದು ಗುರಿಯ ಸಾಧನೆಗಾಗಿ ವಿನಾಸಲಾಗಿದ್ದುವು. ಆ ಮಹತ್ಕಾರ್ಯ ಕೇವಲ ಒಬ್ಬ ವ್ಯಕ್ತಿಯಿಂದ ಸಾಧ್ಯವಿಲ್ಲ. ಶ್ರೀರಾಮನೊಬ್ಬನಿಂದಲೇ ರಾವಣನ ಮೂಲೋತ್ಪಾಟನ ಸಾಧ್ಯವಾಗಲಿಲ್ಲ; ಅವನ ಸಹಾಯಕ್ಕೆ ವಾನರ ಸೈನ್ಯವೂ ಆವಶ್ಯಕವಾಗಿತ್ತು. ಅಳಿಲ ಸೇವೆಯ ಮಹಿಮೆಯೂ ಅನಿವಾರ್ಯವಾಗಿತ್ತು. ಹಾಗೆಯೇ ಭರತಖಂಡದ ಏಳಿಗೆಗೆ ಹಲವಾರು ಕೈಗಳ ಜೋಡಣೆ ಅತ್ಯವಶ್ಯ. ಆದರೆ ಆ ಕಾರ್ಯ ಸಾಧನೆಗೆ ಕೆಲವರು ಅರ್ಹರಾದಾರೇ ಹೊರತು ಎಲ್ಲರೂ ಅರ್ಹರಾಗಲಾರರು, ಎಂದು ಅವರು ತಮ್ಮ ರಾಜಕೀಯ ಜೀವನದ ದೀರ್ಘಾನುಭವದಿಂದ ಅರಿತಿದ್ದರು. ಆದುದರಿಂದ ಉತ್ತಮವಾದ ಸೇವಕ ದಳವೊಂದನ್ನು ಸಜ್ಜುಗೊಳಿಸುವುದಕ್ಕಾಗಿ ೧೯೦೫ರಲ್ಲಿ ಪುಣೆ ನಗರದಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ (ಭಾರತೀಯ ಸಮಾಜ ಸೇವಕರು) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ಆ ಸಂಸ್ಥೆಯ ಸ್ಥಾಪನೋದ್ದೇಶವನ್ನು ಅವರೇ ಆ ರೀತಿ ವಿವರಿಸಿದ್ದಾರೆ!

"ಈಗ ಕೆಲವು ಮಂದಿ ಭಾರತೀಯರಿಗೆ ಸರಿಯಾದ ರೀತಿಯಲ್ಲಿ ತರಬೇತು ಕೊಡಬೇಕಾಗಿದೆ. ಭಾರತಮಾತೆಯ ಸೇವೆ ಧಾರ್ಮಿಕ ಕಾರ್ಯಗಳಲ್ಲಿ ಒಂದು ಎಂಬ ಭಾವನೆ ನಮ್ಮವರಲ್ಲಿ ಮೂಡಬೇಕಾಗಿದೆ. ದೇಶ ಪ್ರೇಮ ಹೃದಯವನ್ನು ತುಂಬಬೇಕಾಗಿದೆ. ಉಳಿದುದನ್ನು ಪಕ್ಕಕ್ಕೆ ಸರಿಸಬೇಕಾಗಿದೆ. ಏನೇ ಅಪಾಯ ಒದಗಿದರೂ ಕೆಚ್ಚುಗೆಡಬಾರದು; ಇಟ್ಟ ಗುರಿಯನ್ನು ಬಿಡಬಾರದು."

"ಈಗ ಯುವಕರು ಮುಂದೆ ಬಂದು ಸರ್ವವನ್ನೂ ತ್ಯಜಿಸಲು ಪಣ ತೊಡಬೇಕಾಗಿದೆ. ನಮ್ಮ ನಮ್ಮ ಆಶೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ನಾವು ಮಗ್ನರಾದರೆ ದೇಶ ಹೇಗೆ ಮುಂದುವರಿದೀತು. ದೇಶದ ಅವನತಿಗೆ ನಾವೇ ಹೊಣೆಗಾರರು ಎಂಬುದನ್ನು ಯಾರೂ ಮರೆಯಬಾರದು."

Sri Vidyabharathi Book Centre, Sringeri

CC-O. In Public Domain. Digitized by eGangotri

"ದೇಶಪ್ರೇಮ ಹುಚ್ಚು ಹೊನಲಾಗಿ ಪ್ರವಹಿಸಬೇಕು; ಅದು ನಮ್ಮ ನಾಡಿ ನಾಡಿಯನ್ನು ಕಾವೇರಿಸಬೇಕು; ದೇಹವನ್ನು ತ್ಯಜಿಸುವಂಥ ಸಂಕಲ್ಪಕ್ಕೆ ಅದು ಕಾರಣವಾಗಬೇಕು. ಈ ಸಮರ್ಪಣ ಬುದ್ಧಿಯಿಂದ ನಾವು ದೇಶಸೇವೆಗೆ ಸಿದ್ಧರಾದರೆ ಪ್ರಪಂಚದ ಯಾವ ಸಾಮ್ರಾಜ್ಯವೂ ನಮ್ಮನ್ನು ತುಳಿಯಲಾರದು." ಗೋಖಲೆಯವರ ಈ ಮಾತುಗಳು ಆಗಿನ ಸನ್ನಿವೇಶಕ್ಕಿಂತ ಈಗಿನ ಸನ್ನಿವೇಶಕ್ಕೆ ತುಂಬ ಉಚಿತವಾಗಿ ಸಲ್ಲುತ್ತವೆ.

ಸಾರ್ವಜನಿಕ ಸೇವೆಯಲ್ಲಿ ಶಿಕ್ಷಣ ಕೊಡುವುದೇ ಆ ಸಂಸ್ಥೆಯ ಮುಖ್ಯ ಧ್ಯೇಯವಾಗಿತ್ತು. ಉತ್ತಮ ದರ್ಜೆಯ ಪದವೀಧರರಿಗೆ ಮಾತ್ರ ಶಿಕ್ಷಣ ಕೊಡಲಾಗುತ್ತಿತ್ತು. ಶಿಕ್ಷಣದ ಅವಧಿ ಐದುವರ್ಷಗಳು. ಆ ಅವಧಿಯಲ್ಲಿ ಅವರು ಬೌದ್ಧಿಕ ಶಕ್ತಿಯನ್ನು ಗಳಿಸಬೇಕಾಗಿತ್ತಲ್ಲದೆ, ನಾಡನ್ನೆಲ್ಲ ಸುತ್ತಿ ಜನತೆಯ ಹೃದಯವನ್ನು ಅರಿಯಬೇಕಾಗಿತ್ತು. ಅವರು ನಾಯಕರ ಮಾತನ್ನು ಲವಲೇಶವೂ ಮಿರುವಂತಿರಲಿಲ್ಲ. ಅವರು ಆ ಸಂಸ್ಥೆಯನ್ನು ಸೇರುವ ಮುನ್ನ ಏಳು ಪ್ರತಿಜ್ಞೆಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಅವು ಹೀಗಿವೆ;

೧) ಕಾಯಾ ವಾಚಾ ಮನಸಾ ನಾನು ಭಾರತಮಾತೆಗೆ ಸೇವೆ ಸಲ್ಲಿಸುತ್ತೇನೆ.

೨) ಈ ನನ್ನ ಸೇವೆ ಸ್ವಾರ್ಥರಹಿತವಾಗಿರುತ್ತದೆ.

೩) ಜಾತಿ ಮತ ಕುಲಗಳ ಭೇದವಿಲ್ಲದೆ ಭಾರತೀಯರೆಲ್ಲರೂ ನನ್ನ ಸಹೋದರರೆಂದು ಭಾವಿಸಿ, ಅವರೆಲ್ಲರ ಪುರೋಭಿವೃದ್ಧಿಗಾಗಿ ದುಡಿಯುತ್ತೇನೆ.

೪) ಸಂಸ್ಥೆ ಕೊಡಬಹುದಾದಲ್ಲಿ ನನ್ನ ಮತ್ತು ನನ್ನ ಕುಟುಂಬದ ಸರಳ ಜೀವನಕ್ಕೆ ಎಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಪಡೆಯುತ್ತೇನೆ. ನನಗಾಗಿ ಹಣ ಸಂಪಾದಿಸಲು ನನ್ನ ಶಕ್ತಿಯನ್ನು ಬಳಸುವುದಿಲ್ಲ.

೫) ಸ್ವಚ್ಛ ಜೀವನವನ್ನು ನಡೆಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೬) ಯಾರ ಜೊತೆಯಲ್ಲಿಯೂ ವೈಯಕ್ತಿಕವಾಗಿ ಜಗಳ ಮಾಡುವುದಿಲ್ಲ.

೭) ಸಂಸ್ಥೆಯ ಧ್ಯೇಯಸಾಧನೆಗಾಗಿ ಸತತ ಶ್ರದ್ಧೆಯಿಂದ ಶ್ರಮಿಸುತ್ತೇನೆ. ಅದರ ಧ್ಯೇಯಸಾಧನೆಗೆ ಕುಂದು ತರುವ ಯಾವ ಕಾರ್ಯವನ್ನೂ ಕೈಗೊಳ್ಳುವುದಿಲ್ಲ.

೧೯೦೫ ರ ಹೊತ್ತಿಗೆ ಭರತಖಂಡದ ರಾಜಕೀಯ ರಂಗದಲ್ಲಿ ಕಗ್ಗತ್ತಲೆ ಕವಿಯಿತು. ವಿದೇಶಿಯರ ಆಡಳಿತದಿಂದ ಭಾರತೀಯರ ಕಷ್ಟ ಸಂಕಷ್ಟಗಳು ದಿನೇ ದಿನೇ ಹೆಚ್ಚತೊಡಗಿದವು. ಭಾರತೀಯರ ಆತ್ಮಗೌರವವನ್ನು ಕುಂದಿಸಿ ಅವರ ಸ್ವಾಭಿಮಾನವನ್ನು ಕೆರಳಿಸುವ ದ್ವೇಷಾಗ್ನಿಯನ್ನು ಹೊತ್ತಿಸುವ ಘಟನಾ ಪರಂಪರೆಗಳಿಗೆ ವಿದೇಶಿಯರ ಆಡಳಿತ ಕಾರಣವಾಯಿತು. ವಂಗವಿಭಜನೆಯ ಘಟನೆ ಪ್ರಾಪ್ತವಾದಾಗಲಂತು ಇಲ್ಲಿಯ ರಾಜಕೀಯ ಪರಿಸ್ಥಿತಿ ವಿಷಮಿಸಿತು. ಇಲ್ಲಿಯ ರಾಷ್ಟ್ರಾಭಿಮಾನಿಗಳ ಮನಸ್ಸಿನಲ್ಲಿದ್ದ ರಾಜೀ ಮನೋಭಾವ ನಿರ್ಮೂಲವಾಯಿತು. 'ಸ್ವರಾಜ್ಯ' 'ಸ್ವದೇಶಿ' ಮತ್ತು 'ವಂದೇ ಮಾತರಂ' ಘೋಷಣೆಗಳು ಆಕಂದರಾದ್ರಿಗಳಲ್ಲಿ ಸಚರಾಚರ ವಸ್ತುಗಳಲ್ಲಿ ಅನುರಣಿತವಾಯಿತು. ಈ ವಿಷಮ ಪರಿಸ್ಥಿತಿಯಿಂದ ವ್ಯಾಕುಲಚಿತ್ತರಾದ ಗೋಖಲೆಯವರು ಬ್ರಿಟಿಷ್ ರಾಜಕಾರಣಿಗಳ ಮನಸ್ಸನ್ನು ಒಲಿಸಿಕೊಳ್ಳಲು ಇಂಗ್ಲೆಂಡಿಗೆ ಹೋದರು. ಅಲ್ಲಿ ಊರಿಂದೂರಿಗೆ ಸುತ್ತಿ ೫೦ ದಿನಗಳಲ್ಲಿ ೪೫ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಇಲ್ಲಿಯ ಬಡತನ, ಅಜ್ಞಾನ, ಸಾವು, ಸಾಲ, ಬರ, ಅನಾರೋಗ್ಯಗಳನ್ನು ವಿಷದವಾಗಿ ಚಿತ್ರಿಸಿದುದಲ್ಲದೆ ಸುಂಕಸಾರಿಗೆಗಳ ಮೂಲಕ ಆಗುತ್ತಿದ್ದ ಶೋಷಣೆಯನ್ನು ಟೀಕಿಸಿದರು. ಅವರ ವಾದದ ಸರಣಿಯನ್ನೂ ಅವರ ವಾದಕ್ಕೆ ಹಿನ್ನೆಲೆಯಾಗಿದ್ದ ಜನರ ಅಭೀಷ್ಟೆಯನ್ನೂ ಅಲ್ಲಿಯ ಜನರು ಮೆಚ್ಚಿದರು. ಅವರು ಮತ್ತೆ ಬೊಂಬಾಯಿ ರೇವನ್ನು ತಲುಪಿದಾಗ ಸ್ವಪಕ್ಷ ಪ್ರತಿಪಕ್ಷದವರೆಲ್ಲ ಒಂದಾಗಿ ಅದ್ಭುತವಾದ ಸ್ವಾಗತವನ್ನು ನೀಡಿದರು. ಅವರ ಉಜ್ವಲ ದೇಶಾಭಿಮಾನ

Sri Vidyabharathi Book Centre, Sringeri

CC-O. In Public Domain. Digitized by eGangotri
ಸ್ವಾರ್ಥತ್ಯಾಗಗಳಿಗೆ ಮೆಚ್ಚಿದ ತಾಯಿನಾಡು ಅವರನ್ನು ಕಾಂಗ್ರೆಸ್ಸಿನ ಅಧ್ಯಕ್ಷ ಗದ್ದುಗೆಗೆ ಏರಿಸಿ, ತನ್ನ ನಾಯಕನೆಂದು ಸಾರಿ ಗೌರವಿಸಿತು. ಬೆನಾರಿಸ್ ಕಾಂಗ್ರೆಸ್ ಅಧಿವೇಶನದ ಅವರ ಅಧ್ಯಕ್ಷ ಭಾಷಣ ಕಾಂಗ್ರೆಸ್ಸಿನ ಇತಿಹಾಸದಲ್ಲೊಂದು ನೂತನ ಪ್ರಕರಣವನ್ನು ಆರಂಭಿಸಿತು. ಕಾಂಗ್ರೆಸ್ಸಿನಲ್ಲಿ ಆಗತಾನೆ ಮೊಳೆಯುತ್ತಿದ್ದ ಬಣಗಳನ್ನು ನಿರ್ಮೂಲ ಮಾಡುವುದಕ್ಕಾಗಿ ಉತ್ತರ ಭಾರತವನ್ನು ಒಂದು ಸಾರಿ ಸುತ್ತಿದರು. ಅವರು ಆ ಸಂದರ್ಭದಲ್ಲಿ ಮಾಡಿದ ಕೆಲವು ಭಾಷಣಗಳು ವಿರೋಧಿಗಳ ತಂಡವನ್ನು ಸೃಷ್ಟಿಸಿತು. ಆದರೆ ಅವರು ತಮ್ಮ ಬುದ್ಧಿಗೆ ಯಾವ ಅಭಿಪ್ರಾಯ ಸರಿಯೆಂದು ತೋರುತ್ತಿತ್ತೋ ಅದನ್ನು ನೇರವಾಗಿ ಹೇಳಿಬಿಡುತ್ತಿದ್ದರು. ಮುಚ್ಚು ಮರೆಗಾಗಲೀ, ಥಳುಕಿಗಾಗಲೀ ಅವರ ಹೃದಯದಲ್ಲಿ ಸ್ಥಳವಿರಲಿಲ್ಲ.

ಬ್ರಿಟನ್ನಿನ ರಾಜಕಾರಣಿಗಳಲ್ಲಿ ಗೋಖಲೆಯವರು ವಿಶೇಷವಾದ ಗೌರವವನ್ನಿಟ್ಟಿದ್ದರು. ಭಾರತೀಯರ ಕ್ಷೇಮ ಸಾಧನೆಯ ವಿಷಯದಲ್ಲಿ ಬಹು ಕಾತರರಾಗಿದ್ದರೂ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಬೇಕೆಂದು ಅಂದವರಲ್ಲ. ಆಡಳಿತಗಾರರು ವಿದೇಶಿಯರೇ ಇರಲಿ ಅವರಲ್ಲಿ ರಾಷ್ಟ್ರೀಯ ಮನೋಭಾವನೆ ಇದ್ದರೆ ಸಾಕು, ದಲಿತ ಜನಾಂಗದ ಬಗೆಗೆ ಅನುಕಂಪ ಇದ್ದರೆ ಸಾಕು ಎಂದುಕೊಂಡಿದ್ದರು. ರಾಜಿಯಿಂದ, ಸಹಾನುಭೂತಿಯಿಂದ ಪರಸ್ಪರ ಸ್ನೇಹದಿಂದ ಭಾರತೀಯರು ತಮ್ಮ ಇಷ್ಟಾರ್ಥವನ್ನು ಸಾಧಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಕಲಹಗಳ ಮೂಲಕ ಆಡಳಿತ ಯಂತ್ರವನ್ನು ಸಡಿಲಿಸಿ ಸ್ವರಾಜ್ಯವನ್ನು ಪಡೆಯುತ್ತೇನೆನ್ನುವುದು ಒಳಿತಲ್ಲ. ಅಂಥ ಕೃತ್ಯಗಳಿಂದ ಲಭಿಸುವ ಫಲ ದ್ವೇಷ, ಅಸೂಯೆ, ಭೀಕರ ಕೊಲೆ ಇತ್ಯಾದಿ ಎಂದು ಹೇಳುತ್ತಿದ್ದರು. ಉಗ್ರಪಕ್ಷದವರು ಅವರ ಅಭಿಪ್ರಾಯವನ್ನು ಒಪ್ಪುತ್ತಿರಲಿಲ್ಲ. ಆದುದರಿಂದಲೇ ಅವರಿಗೂ ತಿಲಕ್ ಅವರಿಗೂ ಮೊದಲಿಂದಲೂ ಭಿನ್ನಾಭಿಪ್ರಾಯವಿತ್ತು. ಆದರೆ ಅಂದಿನ ವಾತಾವರಣದಲ್ಲಿ ಬುದ್ಧಿವಂತರಾದ ರಾಜಕಾರಣಿಗಳು ಏನು ಮಾಡ
Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುದಾಗಿತ್ತೋ ಅಷ್ಟನ್ನು ಗೋಖಲೆಯವರು ಎಸಗಿದರು. ಅವರಿಗೆ ಕ್ರಾಂತಿಗಿಂತ ಪ್ರಗತಿಯಲ್ಲಿ ಅಚಲವಾದ ನಂಬಿಕೆಯಿತ್ತು. ಮಿಂಟೋ ಮಾರ್ಲೆ ಸುಧಾರಣೆಗಳು ಪ್ರಕಟವಾದಾಗ ಅವರು ತುಟಿ ಅಲುಗಿಸಲಿಲ್ಲ. ಏಕೆಂದರೆ ಆ ಸುಧಾರಣೆಗಳಲ್ಲಿ ಅವರ ಕೈವಾಡ ತುಂಬ ಇತ್ತು. ಮಾರ್ಲೆಯವರ ಕೈಯಲ್ಲಿ ಅದು ರೂಪುಗೊಳ್ಳುವ ಹೊತ್ತಿಗೆ ಗೋಖಲೆ ಅವರನ್ನು ಅನೇಕ ಬಾರಿ ನೋಡಿದ್ದರು. ಗೋಖಲೆಯವರ ಬೇಡಿಕೆಗಳನ್ನು ಆ ಸುಧಾರಣೆಗಳು ಒಳಗೊಂಡಿರಲಿಲ್ಲ; ಆದರೆ ಅವರ ಬೇಡಿಕೆಗಳಲ್ಲಿ ಇಲ್ಲದ್ದು ಆ ಸುಧಾರಣೆಗಳಲ್ಲಿರಲಿಲ್ಲ. ಆ ಸುಧಾರಣೆಗಳಿಂದ ಭಾರತೀಯರು ಆಡಳಿತದಲ್ಲಿ ಭಾಗವಹಿಸಲು ತಕ್ಕಮಟ್ಟಿಗೆ ಅವಕಾಶ ದೊರೆಯಿತು.

ಬ್ರಿಟಿಷ್ ಡೊಮಿನಿಯನ್ನಿನ ಚೌಕಟ್ಟಿನಲ್ಲಿಯೇ ಭರತಖಂಡದ ಸ್ವರಾಜ್ಯ ಏರ್ಪಡಬೇಕೆಂಬುದು ಗೋಖಲೆಯವರ ಆಶೆಯಾಗಿತ್ತು. ಮೊದಮೊದಲು ಗಾಂಧೀಜಿಯವರೂ ಇದನ್ನೇ ಅನುಮೋದಿಸುತ್ತಿದ್ದರು. ಪ್ರಥಮ ಮಹಾಯುದ್ಧ ಕಾಲದಲ್ಲಿ ಭಾರತೀಯರ ಸಹಾಯ ಸಹಕಾರವನ್ನು ಪಡೆಯುವುದಕ್ಕೋಸ್ಕರ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವುದಾಗಿ ಬ್ರಿಟಿಷ್ ಸರ್ಕಾರ ಘೋಷಿಸಿತು. ಭಾರತೀಯರೂ ಅವರ ಮಾತಿನಲ್ಲಿ ವಿಶ್ವಾಸವಿಟ್ಟು, ನಾಯಕರ ಸಮ್ಮತಿಯನ್ನು ಪಡೆದು ಯುದ್ಧದಲ್ಲಿ ಶ್ರದ್ಧಾ ಪ್ರಾಮಾಣಿಕತೆಗಳಿಂದ ಸಹಾಯ ಮಾಡಿದರು. ಮುಂದಿನ ಪೀಳಿಗೆಯ ಶ್ರೇಯಸ್ಸಿಗಾಗಿ ಹಲವರು ಯೋಧರು ಪ್ರಾಣವನ್ನು ತೆತ್ತರು. ಆಗಿನ ವೈಸರಾಯರಾದ ಲಾರ್ಡ್‌ವಿಲ್ಲಿಂಗ್ಡನ್ನರು ಅತ್ಯವಶ್ಯವಾಗಿ ಆಗಬೇಕಾದ ಸುಧಾರಣೆಗಳನ್ನು ಕುರಿತು ವಿವರಣೆಯನ್ನು ಕೊಡುವಂತೆ ಗೋಖಲೆಯವರನ್ನು ಕೇಳಿದರು. ಗೋಖಲೆಯವರು ತಮ್ಮ ಅಭಿಪ್ರಾಯಗಳನ್ನು ಗುರುತು ಹಾಕಿಕೊಂಡರು. ಇಬ್ಬಿಬ್ಬರು ಮಿತ್ರರೊಡನೆ ಆಲೋಚಿಸಿ ನಿರ್ಧಾರಕ್ಕೆ ಬಂದ ಮೇಲೆ ಅವುಗಳನ್ನು ವೈಸ್‌ರಾಯ್‌ಗೆ ಕಳುಹಿಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕೆಂದು ಅಂದುಕೊಂಡಿದ್ದರು. ಆದರೆ ಅಷ್ಟರಲ್ಲಿ (೧೯-೨-೧೯೧೫) ಅವರೇ ದೈವಾಧೀನರಾದರು.

ಭರತಖಂಡ ರಾಜಕೀಯ ಇತಿಹಾಸದಲ್ಲಿ ಎರಡು ಹೆಸರುಗಳು ಚಿರಸ್ಮರಣೀಯವಾಗಿ ಸದಾ ಪ್ರೇರಕ ಶಕ್ತಿಯಾಗಿ ಉಳಿಯುತ್ತವೆ. ಅವರಿಬ್ಬರು ಪರಸ್ಪರ ಪ್ರತಿಸ್ಪರ್ಧಿಗಳಲ್ಲ. ಒಂದು ಗುರುಶಕ್ತಿ ಮತ್ತೊಂದು ಶಿಷ್ಯ ಶಕ್ತಿ. ಗಾಂಧೀಜಿಯವರೇ ಗೋಖಲೆಯವರು ತಮ್ಮ ರಾಜಕೀಯ ಗುರುಗಳೆಂದು ಒಪ್ಪಿಕೊಂಡಿದ್ದಾರೆ. ಆ ಗುರುಶಿಷ್ಯರ ಪ್ರಥಮ ಭೇಟಿ ಎಷ್ಟು ಮಹಿಮಾನ್ವಿತವಾದುದು; ಪ್ರಥಮ ಭೇಟಿಯ ದಿನ ಗೋಖಲೆಯವರು, ಶಾಲೋಪಾಧ್ಯಾಯರು ಹೊಸದಾಗಿ ಸೇರಲು ಬಂದಿರುವ ವಿದ್ಯಾರ್ಥಿಯನ್ನು ಪರೀಕ್ಷಿಸುವಂತೆ ಗಾಂಧೀಜಿಯವರನ್ನು ಪರೀಕ್ಷಿಸಿದರಂತೆ! ಆದರೂ ಜನ್ಮ ಜನ್ಮಾಂತರಗಳ ಸಂಬಂಧ ಮರುಕೊಳಿಸಿದಂತಾಯಿತಂತೆ. ಗೋಖಲೆಯವರ ದರ್ಶನದಿಂದ ಗಾಂಧೀಜಿಯವರಿಗೆ ಗಂಗಾಸ್ನಾನವಾದಂತಾಯಿತಂತೆ. ಗಾಂಧೀಜಿಯವರ ದೃಷ್ಟಿಗೆ ಗೋಖಲೆಯವರು ಮಹೋನ್ನತ ವ್ಯಕ್ತಿಯಂತೆ ಕಂಡರು. ಗೋಖಲೆಯವರೂ ಗಾಂಧೀಜಿಯವರನ್ನು ತಮ್ಮನಂತೆ ಪ್ರೀತಿಸಿದರು. (ಅವರಿಬ್ಬರೂ ಭಾರತ ಮಾತೆಯ ಪುತ್ರರಲ್ಲವೆ!) ರಾಜಕೀಯ ರಹಸ್ಯಗಳನ್ನೂ ತಿಳಿಸಿದರು; ಅವರನ್ನು ಅನೇಕ ನಾಯಕರಿಗೆ ಪರಿಚಯ ಮಾಡಿಕೊಟ್ಟರು. ಮಹಿಮೆ ಮಹಿಮೆಗೆ ಗೋಚರಿಸುವಂತೆ ಗೋಖಲೆಯವರು ಗಾಂಧೀಜಿಯವರಲ್ಲಿ ಭಾರತೀಯರ ಉದ್ಧಾರವನ್ನು ಕಂಡರು, ಭರತಖಂಡದ ಹಿರಿಮೆಯನ್ನು ಪ್ರದರ್ಶಿಸಿದರು.

ಗೋಖಲೆಯವರ ರಾಜೀಮನೋಭಾವ ತಿಲಕ್‌ರಂತಹ ತಜ್ಞರಿಗೆ ಹಿಡಿಸುತ್ತಿರಲಿಲ್ಲ. ಗಾಂಧೀಜಿಗಂತೂ ಕೂಡಲೆ ಹಿಡಿಸಿತು. ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಗತಿಗಳ ಪ್ರತ್ಯಕ್ಷಾನುಭವವನ್ನು ಪಡೆಯಲು ಗೋಖಲೆಯವರು ಆಫ್ರಿಕಾಕ್ಕೆ ಹೋದರಷ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹೋದರರ ಕಷ್ಟಸ್ಥಿತಿಯನ್ನು ನೋಡಿ ಮರುಗಿದರು. ಅಲ್ಲಿಯ ಆಡಳಿತಗಾರರನ್ನು ಕಂಡು ಮಾತಾಡಿದರು. ಭಾರತದಿಂದ ಜನರು ವಲಸೆ ಬರುವುದು ತಪ್ಪಿಹೋದರೆ ತೆರಿಗೆಯನ್ನು ತೆಗೆದುಹಾಕುವುದಾಗಿ ಆ ಆಡಳಿತಗಾರರು ಮಾತು ಕೊಟ್ಟರು. ಗೋಖಲೆಯವರು ವಿಧಿಯಿಲ್ಲದೆ ಆ ಷರತ್ತನ್ನು ಒಪ್ಪಿಕೊಳ್ಳಬೇಕಾಯಿತು. ಗಾಂಧೀಜಿಯವರಿಗೂ ಅದು ಸರಿಯೆನ್ನಿಸಿತು. ಆದರೆ ಇಲ್ಲಿಯ ಕೆಲವು ನಾಯಕರು ಅದಕ್ಕಾಗಿ ಗೋಖಲೆಯವರನ್ನು ಖಂಡಿಸಿದರು.

ಗೋಖಲೆಯವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಒಂದು ಘಟನೆ ನಡೆಯಿತು. ರಾನಡೆಯವರು ಗೋಖಲೆಯವರಿಗೆ ಒಂದು ವಲ್ಲಿಯನ್ನು ಬಹುಮಾನವಾಗಿ ಕೊಟ್ಟಿದ್ದರಂತೆ. ಅದನ್ನು ಅವರು ಬಹಳ ಎಚ್ಚರಿಕೆಯಿಂದ ಇಟ್ಟುಕೊಂಡಿದ್ದರು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಅದನ್ನು ಹೊರಗೆ ತೆಗೆಯುತ್ತಿದ್ದರು. ಒಮ್ಮೆ ಭೋಜನಕೂಟವೊಂದಕ್ಕೆ ಅದನ್ನು ಧರಿಸಿಕೊಂಡು ಹೋಗಿದ್ದರು. ಆಗ ಅದು ಸುಕ್ಕು ಸುಕ್ಕಾಗಿ, ಅಂದಗೆಟ್ಟಿತ್ತು. ಅದನ್ನು ಅಗಸನಿಗೆ ಕಳುಹಿಸಿ ಚಲುವೆ ಮಾಡಿಸಲು ವೇಳೆಯಿರಲಿಲ್ಲ; ಅದು ಸಾಧ್ಯವೂ ಆಗುತ್ತಿರಲಿಲ್ಲ. ಗಾಂಧೀಜಿ ತಾವೇ ಚಲುವೆ ಮಾಡಿಕೊಡಲು ಮುಂದೆ ಬಂದರು. 'ನೀನು ಉತ್ತಮ ವಕೀಲ, ನಿಜ; ಆದರೆ ಒಳ್ಳೆಯ ಅಗಸನೆಂದು ನಂಬುವುದು ಹೇಗೆ. ಬಹುಶಃ ಈ ನನ್ನ ವಲ್ಲಿಯ ಬೆಲೆ ನಿನಗೆ ಗೊತ್ತಿರಲಾರದು' ಎಂದರು. ಅಂತು ಗಾಂಧೀಜಿ ಅದನ್ನು ತೊಳೆದು ಚಲುವೆ ಮಾಡಿಕೊಟ್ಟು ಗೋಖಲೆಯವರಿಂದ ಪ್ರಶಸ್ತಿಯನ್ನು ಪಡೆದರು.

ಗಾಂಧೀಜಿಯವರು ಗೋಖಲೆಯವರಲ್ಲಿಟ್ಟಿದ್ದ ಭಕ್ತಿ ಗೌರವಗಳಿಗೆ ನಿದರ್ಶನವಾಗಿ ಇಂಗ್ಲೆಂಡಿನಲ್ಲಿ ನಡೆದ ಮತ್ತೊಂದು ಘಟನೆಯನ್ನಿಲ್ಲಿ ಉದಾಹರಿಸಬಹುದು. ಗಾಂಧೀಜಿ ಖಾಯಿಲೆಯಿಂದ ನರಳುತ್ತಿದ್ದರು. ಕ್ರಮೇಣ ನಿಶ್ಶಕ್ತರಾದರು. ಡಾಕ್ಟರು ಹಾಲು ಕುಡಿಯಬೇಕೆಂದು ಸಲಹೆ ಮಾಡಿದರು. ಗಾಂಧೀಜಿ ಕೆಲವು ದಿನಗಳು ಕುಡಿಯದೆಯೇ ಹಾಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಡಿಯುವುದನ್ನು ನಿಲ್ಲಿಸಿದ್ದರಿಂದ ಮತ್ತೆ ಸ್ವೀಕರಿಸಲಿಲ್ಲ. ಗೋಖಲೆಯವರು ಒತ್ತಾಯ ಮಾಡಿದರು. ಅವರ ಒತ್ತಾಯವನ್ನು ಗಾಂಧೀಜಿ ನಿರಾಕರಿಸುವಂತಿರಲಿಲ್ಲ. ತಮ್ಮ ನಿರ್ಧಾರವನ್ನು ವ್ಯಕ್ತಪಡಿಸಲು ೨೪ ಗಂಟೆಗಳ ಕಾಲಾವಕಾಶವನ್ನು ಕೇಳಿದರು. ಅಂದು ರಾತ್ರಿಯೆಲ್ಲ ನಿದ್ರೆಯಿಲ್ಲದೆ ಯೋಚಿಸಿದರು. ಹಿಂದೆ ಅನೇಕ ಸಾರಿ ಕರುಗಳಿಗೆ ಹಾಲು ಬಿಡದೆ ಕೊನೆಯ ತೊಟ್ಟಿರುವ ತನಕ ಹಸುಗಳ ಮೊಲೆಯನ್ನು ಗೋವಳರು ಹಿಂಡುತ್ತಿದ್ದುದನ್ನು ಅವರು ಕಂಡಿದ್ದರು. ಆ ಚಿತ್ರ ಅವರ ಕಣ್ಮುಂದೆ ಕಟ್ಟಿದಂತಿತ್ತು. ಆದುದರಿಂದ ಹಾಲು ಕುಡಿಯಬಾರದೆಂದೇ ನಿರ್ಧರಿಸಿದರು. ಆದರೆ ಆ ನಿರ್ಧಾರವನ್ನು ಗೋಖಲೆಯವರಿಗೆ ತಿಳಿಸಲು ಹೆದರಿದರು. ಕೊನೆಗೆ ಗೋಖಲೆಯವರು ಗಾಂಧೀಜಿಯವರ ಮೊಂಡುತನಕ್ಕೆ ಕಟ್ಟುಬಿದ್ದರು.

ಆ ಗುರು ಶಿಷ್ಯರ ಸಂಬಂಧ ಅಸಾದೃಶವಾದುದು, ನಿಜ. ಆದರೆ ಇಬ್ಬರೂ ತಮ್ಮ ಆತ್ಮವಿಶ್ವಾಸದಲ್ಲಿ ನಿಷ್ಠೆಯಿಟ್ಟಿದ್ದರು. ಅವರಿಬ್ಬರ ಧ್ಯೇಯ ಒಂದೇ ಆದರೂ ಅವರು ಕೈಕೊಂಡ ಮಾರ್ಗ ಭಿನ್ನವಾದುವು. ಒಬ್ಬರು ಮತ್ತೊಬ್ಬರನ್ನು ತಮ್ಮ ದಾರಿಗೆ ಸೆಳೆಯಲು ಯತ್ನಿಸಿದರು. ಒಬ್ಬರೂ ಸಗ್ಗಲಿಲ್ಲ. 'ನನ್ನ ದಾರಿ ನನ್ನದು, ನಿನ್ನ ದಾರಿ ನಿನ್ನದು. ಹೇಗೋ ಭರತಖಂಡಕ್ಕೆ ಸ್ವಾತಂತ್ರ್ಯ ದೊರೆತರೆ ಸಾಕು. ಅದು ದೊರೆತ ಮೇಲೆ ಬೇರೆ ಚಿಂತೆ' ಎಂದು ಗುರು ಅಂದರು. ಶಿಷ್ಯ 'ಅಸ್ತು' ಎಂದರು. ತಾವು ಸ್ಥಾಪಿಸಿದ್ದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೆ ಗಾಂಧೀಜಿಯವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಲು ಗೋಖಲೆಯವರು ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಗೋಖಲೆಯವರು ತೀರಿಕೊಂಡ ಮೇಲೆ ಒಬ್ಬ ಹಿರಿಯ ಮಾರ್ಗದರ್ಶಿಯನ್ನು ಕಳೆದುಕೊಂಡಂತೆ ಗಾಂಧೀಜಿಯವರು ವ್ಯಥೆಗೊಂಡರು. ಗುರು ಸ್ಥಾಪಿಸಿದ ಸಂಸ್ಥೆಯನ್ನು ಕಟ್ಟುವ, ಬೆಳೆಸುವ ಮತ್ತು ಸೇವಿಸುವ ಹಂಬಲದಿಂದ ಅದರ ಸದಸ್ಯತ್ವಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜಿ ಹಾಕಿದರು. ಆ ಸಂಸ್ಥೆಯು ಒಂದು ಗುಂಪಿನವರಿಗೂ ತಮಗೂ ಕೆಲವು ಪ್ರಮುಖ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿದ್ದುದರಿಂದ ಗಾಂಧೀಜಿಯವರನ್ನು ಸೇರಿಸಿಕೊಳ್ಳಲು ಇಷ್ಟಪಡಲಿಲ್ಲ. ಅವರ ಮನಸ್ಸಿಗೆ ಅಹಿತವನ್ನುಂಟುಮಾಡಬಾರದೆಂದು ಗಾಂಧೀಜಿಯವರೇ ತಮ್ಮ ಅರ್ಜಿಯನ್ನು ವಾಪಸ್ಸು ಪಡೆದರು. ಆದರೂ ಅವರು ಕೊನೆಯತನಕ ಆ ಸಂಸ್ಥೆಯಲ್ಲಿ ವಿಶೇಷ ಗೌರವನ್ನಿಟ್ಟಿದ್ದರು. ಸಂಸ್ಥೆ ಯಾವುದಾದರೇನು-ಶಿಷ್ಯ ತನ್ನ ತಪಶ್ಶಕ್ತಿಯಿಂದ ಗುರುವಿನ ಬಯಕೆಯನ್ನು ಈಡೇರಿಸಿ, ಗುರುವಿಗೆ ಗುರುವಾದನು. "ನನ್ನ ಮೇಲೆ ಪ್ರಭಾವ ಬೀರಿರುವ ಮೂವರು ಮಹಾಪುರುಷರಲ್ಲಿ ಗಾಂಧೀಜಿ ಒಬ್ಬರು" ಎಂಬ ಗೋಖಲೆಯವರ ಹೇಳಿಕೆಯೇ ಇದಕ್ಕೆ ನಿದರ್ಶನವಾಗಿದೆ. 'ನೀನು ಗುರುವೆಂದೊಲಿದೆ ನನಗೆ ಗುರುತನವಿತ್ತೆ, ಮೇಣ್, ಗುರುವಾದೆ' ಎಂದು ಗುರು ಹೇಳಿ ಶಿಷ್ಯನ ಮಹಿಮೆಯನ್ನು ಲೋಕಕ್ಕೆ ಸಾರಿದರು.

ಅಪರಿಚಿತರಾಗಲಿ, ಅಲ್ಪಪರಿಚಿತರಾಗಲಿ ಗೋಖಲೆಯವರನ್ನು ನೋಡುವುದು ಸುಲಭವಾಗಿರಲಿಲ್ಲ. ಅವರಿಂದ ಕೆಲವು ಔಪಚಾರಿಕವಾದ ನಡವಳಿಕೆಯನ್ನು ನಿರೀಕ್ಷಿಸುತ್ತಿದ್ದರು. ಕಿರಿಯರು ಹಿರಿಯರ ಹತ್ತಿರ ವಿನಯ ಗೌರವಗಳಿಂದ ವರ್ತಿಸಬೇಕೆಂದು ಭಾವಿಸಿದ್ದರು. ಏಕೆಂದರೆ ಗುರುಹಿರಿಯರಲ್ಲಿ ಅವರು ವಿಶೇಷವಾದ ಗೌರವವಿಟ್ಟಿದ್ದರು. ದಾದಾಭಾಯಿ ನವರೋಜಿ ಮತ್ತು ರಾನಡೆಯವರು ಅವರ ದೃಷ್ಟಿಯಲ್ಲಿ ಸರ್ವಸ್ವವಾಗಿದ್ದರು. ಅವರಿಬ್ಬರ ಪ್ರಭಾವವನ್ನು ಗೋಖಲೆಯವರ ಜೀವನದಲ್ಲಿ ಬಹುವಾಗಿ ಕಾಣಬಹುದು. ಎದುರಾಳಿಗಳಾದ ಮಾತ್ರಕ್ಕೆ ದ್ವೇಷಿಸುತ್ತಿರಲಿಲ್ಲ. ಹಿರಿಮೆಯಿದ್ದೆಡೆಗೆ ನಮಸ್ಕಾರ ಸಲ್ಲುತ್ತಿತ್ತು. ಲೋಕಮಾನ್ಯ ಬಾಲಗಂಗಾಧರ ತಿಲಕ್‌ರವರು ರಾಜಕೀಯ ಕ್ಷೇತ್ರದಲ್ಲಿ ಉಗ್ರಗಾಮಿಗಳ ಸಂಗಡಕ್ಕೆ ಸೇರಿದವರಾದರೂ ಅವರನ್ನು ದ್ವೇಷಿಸುತ್ತಿರಲಿಲ್ಲ. ಭರತಖಂಡದ ದಾಸ್ಯವಿಮೋಚನೆ ಅವರ ಜೀವನದ ಏಕೈಕ ಧ್ಯೇಯವಾಗಿತ್ತೆಂಬುದು ಗೋಖಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯವರಿಗೆ ಗೊತ್ತಿತ್ತು. ಮಾರ್ಗ ಯಾವುದಾದರೂ ಸರಿಯೆ, ಗುರಿ ಮುಖ್ಯ ಎಂಬುದನ್ನು ಮನಗಂಡು ಅವರು ತಿಲಕ್‌ರನ್ನು ವಿಶೇಷ ಗೌರವದಿಂದ ಕಾಣುತ್ತಿದ್ದರು.

ಅವರ ನಡೆಯಲ್ಲಿ ಸರಳತೆ, ನುಡಿಯಲ್ಲಿ ವಿನಯ ತುಂಬಿದ್ದುವು. ಅಧ್ಯಾಪಕ ವೃತ್ತಿಯಿಂದ ಬರುತ್ತಿದ್ದ ವಿಶ್ರಾಂತಿವೇತನ ೩೦ ರೂ. ಅದರ ಜೊತೆಗೆ ಅವರ ಪುಸ್ತಕಗಳಿಂದ ಸುಮಾರು ೧೦೦ ರೂಪಾಯಿ ಆದಾಯ, ಇಷ್ಟರಿಂದಲೇ ಅವರು ತೃಪ್ತರಾಗಿದ್ದರು. ಅವರು ದೊಡ್ಡ ವಾಗ್ಮಿಯೇನೂ ಅಲ್ಲ. ಆದರೆ ಅವರ ಬಾಯಿಂದ ತಡೆಯಿಲ್ಲದೆ ಮಾತುಗಳು ಸುರಿಯುತ್ತಿದ್ದುವು. ಆ ಮಾತುಗಳಲ್ಲಿ ಶಕ್ತಿಯಿತ್ತೇ ಹೊರತು ಅಣಕವಿರುತ್ತಿರಲಿಲ್ಲ. ಅವರ ನೇತ್ರಗಳಲ್ಲಿ ಓಜಸ್ಸು ಪ್ರಕಾಶಿಸುತ್ತಿತ್ತು. ತಾವು ಬುದ್ಧಿವಂತರೆಂದು ಎಂದೂ ಅವರು ತೋರಿಸಿಕೊಳ್ಳುತ್ತಿರಲಿಲ್ಲ. ಚರ್ಚಾಸ್ಪದವಾದ ವಿಷಯಗಳು ಬಂದಾಗ ಎದುರಾಳಿಗಳ ಮಾತಿಗೆ ಮನ್ನಣೆ ಕೊಡುತ್ತಿದ್ದರು.

ಹೊರಗಡೆಯಿಂದ ನೋಡುವವರು ಗೋಖಲೆಯವರಿಗೆ ದೇವರಲ್ಲಿ ನಂಬಿಕೆಯಿಲ್ಲವೆಂದು ಊಹಿಸಬಹುದು. ಒಮ್ಮೊಮ್ಮೆ ನಾಸ್ತಿಕರಂತೆ ಕಾಣುತ್ತಿದ್ದುದೂ ನಿಜ. ಅವರು ದೇವರಲ್ಲಿ ನಂಬಿಕೆ ಇಟ್ಟಿದ್ದರೆಂಬುದು ಕೊನೆ ಕೊನೆಗೆ ಅವರ ನಡವಳಿಕೆಯಿಂದ ಪರೋಕ್ಷವಾಗಿ ಗೊತ್ತಾಯಿತು. ಭಗವದ್ಗೀತೆ ಮತ್ತು ಭಾರತದ ಶಾಂತಿ ಪರ್ವಗಳನ್ನು ಹೃದ್ಗತಮಾಡಿಕೊಂಡಿದ್ದರು. ಧರ್ಮ ವೈಯಕ್ತಿಕವಾದದ್ದೆಂದು ಅವರು ನಂಬಿದ್ದರು. ಇತರರ ಧರ್ಮವನ್ನು ಎಂದೂ ಹಳಿದವರಲ್ಲ.

ಗೋಖಲೆಯವರು ಎಲ್ಲರಂತೆ ಸಾಧಾರಣರು. ಎಲ್ಲರಂತೆ ಬೆಳೆದರು. ಆದರೆ ಅವರ ಜೀವನದಲ್ಲಿ ಒಂದು ವಿಶೇಷವಿತ್ತು. ಎಣ್ಣೆ ಬಂದಾಗ ಕಣ್ಣು ಮುಚ್ಚುತ್ತಿರಲಿಲ್ಲ. ಅವಕಾಶ ಲಭಿಸಿದಾಗ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಈ ಒಂದು ವಿಶಿಷ್ಟಗುಣ, ಜೊತೆಗೆ ನಿರ್ಭಯತೆಯೇ ಅವರ [illegible] ಕಾರಣ. ಯಾರು ದ್ವೇಷಿಸಿದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಧೈರ್ಯಗೆಡಲಿಲ್ಲ. ಅವರು ಆಶಾವಾದಿ ಸೋತಷ್ಟೂ ನಷ್ಟವಿಲ್ಲವೆಂದು ಭಾವಿಸಿದ್ದರು. ಆದರೆ ಇಷ್ಟಕ್ಕೆಲ್ಲ ಅವರಲ್ಲಿದ್ದ ನಿಶ್ಚಲ ದೇಶಾಭಿಮಾನ ಪ್ರೇರಕ ಶಕ್ತಿಯಾಗಿತ್ತು. ಮಾನ ಲಭಿಸಿದಾದ ನಿರ್ಲಿಪ್ತರಾಗಿದ್ದಂತೆ ಅಪಮಾನ ಒದಗಿದಾಗ ನಿರ್ಲಿಪ್ತರಾಗಿರುತ್ತಿದ್ದರು. ಜಯ, ಅಪಜಯ, ಸುಖದುಃಖ, ಲಾಭಲಾಭ ಯಾವುದರಿಂದಲೂ ಹಿಗ್ಗುತ್ತಿರಲಿಲ್ಲ, ಕುಗ್ಗುತ್ತಿರಲಿಲ್ಲ. ಭಾರತೀಯರ ಸೇವೆಯೇ ಭಾರತೀಯ ಸೇವೆ ಎಂದುಕೊಂಡಿದ್ದರು. ತಾವು, ತಮ್ಮ ಕುಟುಂಬ, ತಮ್ಮ ಬಂಧು ಮಿತ್ರರು, ತಮ್ಮ ಶಕ್ತಿ ಭಕ್ತಿಗಳೆಲ್ಲ ನಾಡಿಗಾಗಿ ಅರ್ಪಿತವಾಗಿದ್ದುವು. ಯಾವಾಗಲೂ ತಮ್ಮ ಕುಟುಂಬದ ವಿಷಯವನ್ನು ಎತ್ತುತ್ತಿರಲಿಲ್ಲ. ತಮ್ಮ ಮಕ್ಕಳಲ್ಲಿ ಅಪಾರವಾದ ಪ್ರೀತಿ ಇತ್ತು. ಆದರೆ ಅದನ್ನು ಹೊರಗಡೆ ತೋರ್ಪಡಿಸುತ್ತಿರಲಿಲ್ಲ. ದೇಶಾಭಿಮಾನದ ಮುಂದೆ ಅದೆಲ್ಲ ತೃಣಸಮಾನ ಎಂದು ಭಾವಿಸಿದ್ದರು. ತ್ಯಾಗವಿಲ್ಲದ ದೇಶಾಭಿಮಾನ ಕೇವಲ ದುರಭಿಮಾನ ಮತ್ತು ವ್ಯರ್ಥಾಭಿಮಾನ. ತ್ಯಾಗ ಮಾಡಿದಂತೆಲ್ಲ ದೇಶಾಭಿಮಾನ ಉಕ್ಕಬೇಕು ಎಂದುಕೊಂಡಿದ್ದರು. ದೇಶಸೇವೆಯಾದರೆ ಕೇವಲ ಕೀರ್ತಿಗಾಗಿ ಶ್ರಮಿಸುವುದಲ್ಲ. ಅಷ್ಟೇ ಅಲ್ಲ. ಕೇವಲ ಆತ್ಮಸಿದ್ಧಿಗಾಗಿ ಅಥವಾ ಸ್ವರ್ಗಪ್ರಾಪ್ತಿಗಾಗಿ ಮಾಡಿದ ತ್ಯಾಗ ಶ್ರೇಷ್ಠವಲ್ಲವೆಂದು ಸಾರಿ ಹೇಳುತ್ತಿದ್ದರು. ಗೋಖಲೆಯವರ ಕೆಲಸವನ್ನು ನೋಡುವುದರಿಂದ ಆನಂದ, ಶಿಕ್ಷಣ ಎರಡೂ ಲಭಿಸುತ್ತಿದ್ದುವು. ಅವರು ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಅವರ ಬಾಂಧವ್ಯ ಮಿತ್ರತ್ವಗಳೆಲ್ಲ ಸಾರ್ವಜನಿಕ ಸೇವೆಗಾಗಿ ಅರ್ಪಿತವಾಗಿದ್ದುವು. ನಾಡಿನ ಹಿತವನ್ನು ಬಿಟ್ಟರೆ ಅವರ ಮಾತು ಬೇರೆ ಕಡೆ ಸಾಗುತ್ತಿರಲಿಲ್ಲ. ಅವರಿಗೆ ತಿರುಗಾಡಲೂ ಪುರುಸತ್ತು ಸಿಗುತ್ತಿರಲಿಲ್ಲವಂತೆ. ಅವರು ಎಲ್ಲಿಯಾದರೂ ಹೋಗಬೇಕಾದರೆ ಕುದುರೆಗಾಡಿಯನ್ನು ಉಪಯೋಗಿಸುತ್ತಿದ್ದರು. ಕುದುರೆಗಾಡಿಯಲ್ಲಿ ಹೋಗುವುದು ಶ್ರೀಮಂತಿಕೆಯ ಲಕ್ಷಣವಲ್ಲವೆಂದೂ ಅಮೂಲ್ಯವಾದ ವೇಳೆಯನ್ನು ಉಳಿಸುವ ದೃಷ್ಟಿಯಿಂದ ಖರ್ಚು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ಅನಿವಾರ್ಯವೆಂದೂ ಹೇಳುತ್ತಿದ್ದರು. ಅವರು ನಿಜವಾಗಿಯೂ ಕರ್ಮಯೋಗಿ ಎಂದು ಗಾಂಧೀಜಿಯವರು ತಮ್ಮ ಆತ್ಮಕಥೆಯಲ್ಲಿ ಗೋಖಲೆಯವರ ವಿಷಯವನ್ನು ಕುರಿತು ಬರೆದಿದ್ದಾರೆ.

ಗೋಪಾಲಕೃಷ್ಣ ಗೋಖಲೆಯವರ ಪಾರ್ಥಿವ ದೇಹ ಮರೆಯಾಗಿ ಕಾಲು ಶತಮಾನ ಮೀರಿದೆ. ಆದರೆ ಅವರ ಆತ್ಮಜ್ಯೋತಿ ಇನ್ನೂ ಪ್ರಜ್ವಲಿಸುತ್ತಿದೆ, ನಾಡನ್ನು ಬೆಳಗುತ್ತಿದೆ. ಅವರು ಬಿಟ್ಟಿರುವ ಆಸ್ತಿಯನ್ನು ನಾವಿಂದು ಅನುಭವಿಸುತ್ತಿದ್ದೇವೆ. ಅವರ ಅಂದಿನ ತ್ಯಾಗದಿಂದ ಇಂದು ನಮ್ಮ ಉದ್ಧಾರವಾಗುತ್ತಿದೆ. ತ್ಯಾಗ, ತ್ಯಾಗದಿಂದ ಮಾತ್ರ ಪೂರ್ಣವಾಗುತ್ತದೆ. ಅವರ ತ್ಯಾಗಕ್ಕಿಂತ ಅಧಿಕತರವಾದ ತ್ಯಾಗದಿಂದ ನಾವು ತಾಯ್ನಾಡನ್ನು ಸೇವಿಸಿದೆವಾದರೆ ಆ ಮಹಾ ವ್ಯಕ್ತಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಿದಂತಾಗುತ್ತದೆ. ನಮ್ಮ ಬಾಳೂ ಸಾರ್ಥಕಗೊಳ್ಳುತ್ತದೆ. ಅವರ ಹಾಗೆಯೇ ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಿಷ್ಠೆಯಿಂದ, ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ, ನಿಸ್ವಾರ್ಥತೆಯಿಂದ ದುಡಿದರೆ ಈಗ ನಾವು ಪಡೆದಿರುವ ಸ್ವಾತಂತ್ರ್ಯ ಚಿರಕಾಲ ನಿಲ್ಲುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನೀವು ಓದಬೇಕಾದ ಹೊಸ ಪುಸ್ತಕಗಳು

ಶರಣ ಚರಿತಾಮೃತ
ಜನಪ್ರಿಯ ವಾಲ್ಮೀಕಿ ರಾಮಾಯಣ
ಕೀರ್ತನ ಭಾಗವತ
ಸನ್ನೂರು

ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳು

(ಪ್ರತಿ ಪುಸ್ತಕದ ಬೆಲೆ ೫೦ ಪೈಸೆ)

ಝಾನ್ಸಿ ರಾಣಿ ಲಕ್ಷ್ಮೀಬಾಯಿ
ಕಾವೇರಿಯ ಕತೆ
ಶ್ರೀ ಶಾರದಾದೇವಿ
ಎರಡು ಕತೆಗಳು
ಭಗವಾನ್ ಬುದ್ಧ
ಹೊಸ ಅಡಿಗೆ
ಹಿಂದೂ ಧರ್ಮ (ಭಾಗ-೧)
ಹಿಂದೂ ಧರ್ಮ (ಭಾಗ-೨)

ಮುಂತಾದ ವಿಜ್ಞಾನ, ಕಲೆ, ಸಮಾಜಶಾಸ್ತ್ರ, ಕತೆ, ಕಾನೂನುಗಳಿಗೆ
ಸಂಬಂಧಿಸಿದ ಅನೇಕ ಪುಸ್ತಕಗಳನ್ನು ತರಿಸಿ ಓದಿರಿ.

ಪ್ರಕಾಶಕರು :

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ವಯಸ್ಕರ ಶಿಕ್ಷ[illegible] ಪ್ರತಿಗಳು—೧೯೭೭

Sri Vidyabharathi Book Centre, Sringeri